# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಗುರುವಾರ, ಜನವರಿ 26, 2023

ಸಂಪುಟ : 49 ಸಂಚಿಕೆ : 254 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 5.00 www.janathavani.com janathavani@mac.com


# 40% ಕಮಿಷನ್: ಪ್ರಮಾಣಕ್ಕೆ ಸಿದ್ಧ

## ಕಾಂಗ್ರೆಸ್‌ನವರೂ ಧರ್ಮಸ್ಥಳಕ್ಕೆ ಬಂದು ಪ್ರಮಾಣ ಮಾಡಲಿ: ಭೈರತಿ

ದಾವಣಗೆರೆ, ಜ.25- ಶೇ.40 ಕಮೀಷನ್ ವಿಚಾರದಲ್ಲಿ ನಾನು ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥನ ಸನ್ನಿಧಿಯಲ್ಲಿ ದೇವರನ್ನು ಮುಟ್ಟಿ ಪ್ರಮಾಣ ಮಾಡಲು ಸಿದ್ಧನಿದ್ಧೇನೆ. ಕಾಂಗ್ರೆಸ್ ನವರು ಕೂಡ ಬಂದು ಪ್ರಮಾಣ ಮಾಡಲಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಸವಾಲು ಹಾಕಿದರು.



ಶೇ.40 ಪರ್ಸೆಂಟ್ ಕಮೀಷನ್ ವಿಚಾರವಾಗಿ ಕಾಂಗ್ರೆಸ್‌ನವರು ಅಧಿಕಾರದ ಲಾಲಸೆಯಿಂದಾಗಿ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಯಾವುದೇ ಆಮಿಷಗಳಿಗೆ ಒಳಗಾ ಗುವ ಜಾಯಮಾನ ನನ್ನದಲ್ಲ. ಅದು ಆ ಪಕ್ಷದವರಿಗೂ ಗೊತ್ತಿದ್ದರೂ ಮಾತನಾಡುವುದು ಸಮಂಜಸವಲ್ಲ. 40% ಕಮೀಷನ್ನು ನಾನು ಪಡೆದಿರುವುದು ನಿಜವೆಂಬುದು ಸಾಬೀತುಪಡಿಸಿದರೆ, ನಾನು ರಾಜಕೀಯ ನಿವೃತ್ತಿ ಪಡೆಯುತ್ತೇನೆ. ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥನ ಸನ್ನಿಧಿಯಲ್ಲಿ ಪ್ರಮಾಣ ಮಾಡುತ್ತೇನೆ. ಕಾಂಗ್ರೆಸ್ ನವರು ಸಹ ಪ್ರಮಾಣ ಮಾಡಲಿ ಎಂದು ಸವಾಲು ಹಾಕಿದರು.

ರಾಜ್ಯದ ಜನ ಎಲ್ಲವನ್ನೂ ಉಚಿತವಾಗಿ ಕೊಡಿ ಎನ್ನುತ್ತಾರೆ. ಅವರು ಕೇಳಿದಂತೆ ಎಲ್ಲವನ್ನು ಉಚಿತವಾಗಿ ನೀಡಿದರೆ ಸರ್ಕಾರ ನಡೆಸುವುದು ಹೇಗೆ? ಇವರೆಲ್ಲ ಸರ್ಕಾರ ನಡೆಸುತ್ತಾರಾ ಎಂದು ಸಚಿವ ಭೈರತಿ ಕಾಂಗ್ರೆಸ್ ಪಕ್ಷದ ಉಚಿತ ವಿದ್ಯುತ್ ಭರವಸೆಗೆ ಆಕ್ಷೇಪ ವ್ಯಕ್ತಪಡಿಸಿದರು. ಸಚಿವ ಸುಧಾಕರ್ ಬಗ್ಗೆ (2ನೇ ಪುಟಕ್ಕೆ)


## ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆಗೆ ಅಂತಿಮ ಮುದ್ರೆ ಬಾಕಿ

ದಾವಣಗೆರೆ, ಜ.25- ದಾವಣಗೆರೆಯಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆ ಕುರಿತಂತೆ ಈಗಾಗಲೇ ಪ್ರಸ್ತಾವನೆ ಸಿದ್ಧವಾಗಿದ್ದು, ಇದಕ್ಕೆ ಸರ್ಕಾರದಿಂದ ಅಂತಿಮ ಮುದ್ರೆ ಹಾಕುವ ಕೆಲಸ ಬಾಕಿ ಇದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ತಿಳಿಸಿದರು.

**ಬಸವ ನಗರ ಪೊಲೀಸ್ ಠಾಣೆ ನೂತನ ಕಟ್ಟಡ ಉದ್ಘಾಟನೆ**

ಅವರು, ಇಂದು ನಗರದ ಬಸವ ನಗರ ಪೊಲೀಸ್ ಠಾಣೆಯ ನೂತನ ಕಟ್ಟಡವನ್ನು ಉದ್ಘಾಟಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ನಗರದಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಆರಂಭಕ್ಕೆ ಜಾಗ ಸೂಕ್ತವಾಗಿದೆ. ಈ ಬಗ್ಗೆ ಆರೋಗ್ಯ ಸಚಿವರು ಹೆಚ್ಚು ಆಸಕ್ತಿ ವಹಿಸಿದ್ದಾರೆ. ಪ್ರಸ್ತಾವನೆ ಕೂಡ ಸಿದ್ದವಿದೆ. ಸಾರ್ವಜನಿಕ ಸಹಭಾಗಿತ್ವದಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಆರಂಭಿಸುವ ಅಂತಿಮ ತೀರ್ಮಾನವನ್ನು ಮುಖ್ಯಮಂತ್ರಿಗಳು ಕೈಗೊಳ್ಳಲಿದ್ದಾರೆ. ಮುಂದಿನ ವಾರ ಮುಖ್ಯಮಂತ್ರಿಗಳೇ ನಗರಕ್ಕೆ ಆಗಮಿಸುತ್ತಿದ್ದು, ಈ ಬಗ್ಗೆ ನಿರ್ಣಯ ಕೈಗೊಳ್ಳುವರು ಎಂದು ಹೇಳಿದರು. (2ನೇ ಪುಟಕ್ಕೆ)

## ಕೃಷ್ಣಗೆ ಪದ್ಮವಿಭೂಷಣ, ಭೈರಪ್ಪ, ಸುಧಾ ಮೂರ್ತಿಗೆ ಪದ್ಮಭೂಷಣದ ಗೌರವ


ಬೆಂಗಳೂರು, ಜ. 25 – ರಾಜ್ಯದ ಎಂಟು ಸಾಧಕರಿಗೆ ಈ ಬಾರಿ ಪದ್ಮ ಪ್ರಶಸ್ತಿ ದೊರೆತಿದೆ. ಮಾಜಿ ಮುಖ್ಯಮಂತ್ರಿ ಎಸ್. ಕೃಷ್ಣ ಅವರು ಪದ್ಮವಿಭೂಷಣ ಹಾಗೂ ಹಿರಿಯ ಸಾಹಿತಿ ಎಸ್.ಎಲ್. ಭೈರಪ್ಪ ಮತ್ತು ಸಮಾಜ ಸೇವಕರಾದ ಸುಧಾ ಮೂರ್ತಿ ಅವರು ಪದ್ಮ ಭೂಷಣ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ.

ಕೊಡಗಿನ ಜಾನಪದ ನರ್ತಕಿ ರಾಣಿ ಮಾಚಯ್ಯ, ವಿಜ್ಞಾನ ವಿಭಾಗದಲ್ಲಿ ಖಾದರ್ ವಲ್ಲಿ ದೂದೇಕುಲ, ಕಲಾ ವಿಭಾಗದಲ್ಲಿ (2ನೇ ಪುಟಕ್ಕೆ)

# 106 ಸಾಧಕರಿಗೆ 'ಪದ್ಮ' ಗೌರವ

## ಮುಲಾಯಂ, ಜಾಕಿರ್ ಹುಸೇನ್ ಸೇರಿ ಹಲವರಿಗೆ ಉನ್ನತ ಪ್ರಶಸ್ತಿ

ನವದೆಹಲಿ, ಜ. 25 – ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಹಾಗೂ ತಬಲಾ ವಾದಕ ಜಾಕಿರ್ ಹುಸೇನ್ ಸೇರಿದಂತೆ ಆರು ಸಾಧಕರಿಗೆ ಈ ಬಾರಿ ದೇಶದ 2ನೇ ಅತ್ಯುನ್ನತ ಪ್ರಶಸ್ತಿಯಾದ ಪದ್ಮ ವಿಭೂಷಣ ಪ್ರಕಟಿಸಲಾಗಿದೆ. ಈ ಬಾರಿ 106 ಸಾಧಕರು ಪದ್ಮ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಗಣರಾಜ್ಯೋತ್ಸವದ ಮುನ್ನಾ ದಿನದಂದು ಪದ್ಮ ಪ್ರಶಸ್ತಿ ಪುರಸ್ಕೃತರ ಪಟ್ಟಿ ಪ್ರಕಟಿಸಲಾಗಿದೆ. ಕಲೆ, ಸಮಾಜ ಸೇವೆ, ರಾಜಕೀಯ, ವಿಜ್ಞಾನ, ವ್ಯಾಪಾರ, ಔಷಧಿ, ಸಾಹಿತ್ಯ, ಶಿಕ್ಷಣ, ಕ್ರೀಡೆ ಹಾಗೂ ನಾಗರಿಕ ಸೇವೆ ಸೇರಿದಂತೆ ಹಲವು ವಲಯಗಳಲ್ಲಿ ಸಾಧನೆ ಮಾಡಿದವರು ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಈ ಬಾರಿ 6 ಸಾಧಕರಿಗೆ ಪದ್ಮ ವಿಭೂಷಣ, 9 ಸಾಧಕರಿಗೆ ಪದ್ಮ ಭೂಷಣ (2ನೇ ಪುಟಕ್ಕೆ)

## ದೂಡಾ ಆಯುಕ್ತರಾಗಿ ಬಸನಗೌಡ ಕೋಟೂರ



ದಾವಣಗೆರೆ, ಜ.25- ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರನ್ನಾಗಿ ಬಸನಗೌಡ ಕೋಟೂರ ಅವರನ್ನು ನೇಮಕ ಮಾಡಿ ಸರ್ಕಾರ ನಿನ್ನೆ ಆದೇಶ ಹೊರಡಿಸಿದೆ. ಕೆ.ಎ.ಎಸ್. ಹಿರಿಯ ಶ್ರೇಣಿ ಅಧಿಕಾರಿಯಾಗಿರುವ ಬಸನಗೌಡ ಕೋಟೂರ ಅವರು ಈ ಹಿಂದೆ ದಾವಣಗೆರೆ ತಾಲ್ಲೂಕು ತಹಶೀಲ್ದಾರ್ ಆಗಿ ಕಾರ್ಯ ನಿರ್ವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು. (2ನೇ ಪುಟಕ್ಕೆ)

## 30 ಲಕ್ಷ ಟನ್ ಗೋಧಿ ಮಾರುಕಟ್ಟೆ ಬಿಡುಗಡೆಗೆ ನಿರ್ಧಾರ

ನವದೆಹಲಿ, ಜ. 25 – ಏರುತ್ತಿರುವ ಗೋಧಿ ಬೆಲೆ ನಿಯಂತ್ರಣಕ್ಕಾಗಿ ತನ್ನಲ್ಲಿರುವ 30 ಲಕ್ಷ ಟನ್ ಅವಕವನ್ನು ಮಾರುಕಟ್ಟೆಯಲ್ಲಿ ಮಾರಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಗೋಧಿ ಹಿಟ್ಟಿನ ಬೆಲೆ ಮಾರುಕಟ್ಟೆಯಲ್ಲಿ ಕೆಜಿಗೆ 38 ರೂ.ಗಳವರೆಗೆ ತಲುಪುತ್ತಿದೆ. ಈ ಹಿನ್ನೆಲೆಯಲ್ಲಿ 30 ಲಕ್ಷ ಟನ್ ಗೋಧಿಯನ್ನು ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯಡಿ ಬಿಡುಗಡೆ ಮಾಡಲಾಗುವುದು ಎಂದು ಮೂಲಗಳು ಹೇಳಿವೆ.

ಗೋಧಿ ಬೆಲೆ ಮಾರುಕಟ್ಟೆಯಲ್ಲಿ ಹೆಚ್ಚಾಗುತ್ತಿದೆ. ಈ (2ನೇ ಪುಟಕ್ಕೆ)

## ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಹೊಳೆಸಿರಿಗೆರೆ ಹಾಲೇಶಪ್ಪ



ದಾವಣಗೆರೆ, ಜ.25- ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ ಹೊಳೆಸಿರಿಗೆರೆಯ ಬಿ. ಹಾಲೇಶಪ್ಪ ಅವರು ಇಂದು ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಜೆ.ಎಸ್. ವೇಣುಗೋಪಾಲ ರೆಡ್ಡಿ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು. ದೂಡಾ ಆಯುಕ್ತ ಬಿ.ಟಿಕುಮಾರಸ್ವಾಮಿ ಚುನಾವಣಾಧಿಕಾರಿಯಾಗಿದ್ದರು. (2ನೇ ಪುಟಕ್ಕೆ)

# ಆಲೂರು ಗ್ರಾಮದ ಕುರ್ಕಿ ಸಿದ್ದಬಸಪ್ಪ ನಿಧನ



ಜನನ : 04.07.1935

ಮರಣ : 25.01.2023

ದಾವಣಗೆರೆ ತಾಲ್ಲೂಕು ಆಲೂರು ಗ್ರಾಮದ ವಾಸಿ

## ಶ್ರೀ ಕುರ್ಕಿ ಸಿದ್ದಬಸಪ್ಪನವರು

ದಿನಾಂಕ 25.01.2023ರ ಬುಧವಾರ ಸಂಜೆ 4.18ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 88 ವರ್ಷ ವಯಸ್ಸಾಗಿತ್ತು. ಏಳು ಜನ ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26.01.2023ರ ಗುರುವಾರ ಮಧ್ಯಾಹ್ನ 1 ಗಂಟೆಗೆ ದಾವಣಗೆರೆ ತಾಲ್ಲೂಕು ಆಲೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮೊಬೈಲ್ : 99005 85875, 99016 28675**

# ಬೆಡ್‌ಗಳು ಬರೋಬ್ಬರಿ ಸಿಬ್ಬಂದೀನೇ ಇಲ್ಲಾರಿ!

ದಾವಣಗೆರೆ, ಜ. 25 – ನಗರದ ಜಿಲ್ಲಾ ಆಸ್ಪತ್ರೆಯ ಬೆಡ್‌ಗಳ ಸಂಖ್ಯೆಯನ್ನು 400ರಿಂದ 930ಕ್ಕೆ ಹೆಚ್ಚಿಸಲಾಗಿದೆ. ಆದರೆ, ಇದಕ್ಕೆ ತಕ್ಕ ಹಾಗೆ ನರ್ಸ್‌ಗಳ ಸಂಖ್ಯೆ ಹೆಚ್ಚಿಸಿಲ್ಲ. 450 ನರ್ಸ್‌ಗಳ ಅಗತ್ಯವಿದೆಯಾದರೂ, ಕೇವಲ 135 ನರ್ಸ್‌ಗಳು ಮಾತ್ರ ಇದ್ದಾರೆ.

ಶಿಥಿಲವಾಗುತ್ತಿರುವ ಕಟ್ಟಡದ ಒಂದು ಭಾಗದ ರಿಪೇರಿಗೆ 31.20 ಕೋಟಿ ರೂ. ಬೇಕಿದೆ. ಓವರ್‌ಹೆಡ್ ಟ್ಯಾಂಕ್ ಅಂತೂ ಸ್ವಚ್ಛಗೊಳಿಸಲಿಕ್ಕೂ ಹೆದರುವಷ್ಟು ಶಿಥಿಲವಾಗಿದೆ.

**ಸಿ.ಜಿ. ಆಸ್ಪತ್ರೆಯಲ್ಲಿ ನರ್ಸಿಂಗ್ ಸಿಬ್ಬಂದಿಯ ಕೊರತೆ**

ಈ ಸಮಸ್ಯೆಗಳು ಪ್ರಸ್ತಾಪಗೊಂಡಿದ್ದು, ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿಯ ಸಾಮಾನ್ಯ ಸಭೆಯಲ್ಲಿ. ಆರೋಗ್ಯ ರಕ್ಷಾ ಸಮಿತಿಯ ಸಾಮಾನ್ಯ ಸಭೆ 2017ರಲ್ಲಿ ನಡೆದಿತ್ತು. ನಂತರ ಮೊದಲ ಬಾರಿಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಸಿಬ್ಬಂದಿ ಕೊರತೆ, ದುರಸ್ತಿಗೆ 31.20 ಕೋಟಿ ರೂ. ಪ್ರಸ್ತಾವನೆ ಹಾಗೂ ಓವರ್‌ಹೆಡ್ ಟ್ಯಾಂಕ್ ನಿರ್ಮಾಣದ ಪ್ರಸ್ತಾವನೆಗಳನ್ನು ರೂಪಿಸಿ, ಸರ್ಕಾರಕ್ಕೆ ಕಳಿಸಿ. ಸರ್ಕಾರದ ಹಂತದಲ್ಲಿ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ಸಚಿವ ಭೈರತಿ ತಿಳಿಸಿದರು.

ಸಭೆಯಲ್ಲಿ ಮಾತನಾಡಿದ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಸಿ.ಜಿ. ಆಸ್ಪತ್ರೆಯಲ್ಲಿ ದುರಸ್ತಿ ಹಾಗೂ ನಿರ್ವಹಣೆ ಇಲ್ಲದೇ ಸಾಕಷ್ಟು ಜಾಗ ಬಳಕೆಯಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಭೆಯಲ್ಲಿ ಮಾತನಾಡಿದ ಸಿ.ಜಿ. ಆಸ್ಪತ್ರೆಯ (2ನೇ ಪುಟಕ್ಕೆ)

## ಬರುವ ಹಂದಿಗಳು, ಹೋಗದ ಡ್ರೈನೇಜ್ ನೀರು

ನಗರದ ಹಳೆ ಭಾಗದ ಮಹಿಳೆಯರು ಮತ್ತು ಮಕ್ಕಳ ಆಸ್ಪತ್ರೆಯ ತಡೆಗೋಡೆಯನ್ನು ಪಾಲಿಕೆ ಸಿಬ್ಬಂದಿ ಒಡೆದಿದ್ದರು. ಇದನ್ನು ಇನ್ನೂ ರಿಪೇರಿ ಮಾಡಿಸಿಲ್ಲ. ಇದರಿಂದ ಹಂದಿ ಹಾಗೂ ನಾಯಿಗಳ ಉಪಟಳವಾಗಿದೆ ಎಂದು ಆಸ್ಪತ್ರೆಯ ಅಧೀಕ್ಷಕ ಡಾ. ಮಧು ತಿಳಿಸಿದರು. ಆಸ್ಪತ್ರೆಯ ಮುಂಭಾಗದಲ್ಲಿರುವ ಡ್ರೈನೇಜ್‌ನಲ್ಲಿ ನೀರು ಸರಾಗವಾಗಿ ಹರಿಯುತ್ತಿಲ್ಲ. ಈ ಬಗ್ಗೆಯೂ ಪಾಲಿಕೆ ಕ್ರಮ ತೆಗೆದುಕೊಳ್ಳಬೇಕಿದೆ ಎಂದವರು ಹೇಳಿದರು.




# ಫೆ.5ರಂದು ಹರಿಹರೇಶ್ವರ ಸ್ವಾಮಿ ರಥೋತ್ಸವ



ಹರಿಹರ, ಜ. 25 - ನಗರದ ಐತಿಹಾಸಿಕ ಪ್ರಸಿದ್ಧ ಶ್ರೀ ಹರಿಹರೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವವು ಫೆಬ್ರವರಿ 5 ರ ಭಾನುವಾರ ಬೆಳಗ್ಗೆ 10-50 ಗಂಟೆಗೆ ಪೂಜಾ ವಿಧಿ-ವಿಧಾನಗಳೊಂದಿಗೆ ನೆರವೇರಲಿದೆ ಎಂದು ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ತಿಳಿಸಿದರು.

ನಗರದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿ, ಜನವರಿ 31 ಮಂಗಳವಾರದಿಂದ ಫೆಬ್ರವರಿ 6 ರ ಸೋಮವಾರದವರೆಗೆ ಪೂಜಾ ಕಾರ್ಯಗಳನ್ನು ಮಾಡಲಾಗುತ್ತದೆ. ಪ್ರತಿನಿತ್ಯ ಬೆಳಿಗ್ಗೆ ಗಣಪತಿ ಪೂಜೆ, ರುದ್ರಾಭಿಷೇಕ, ಅಲಂಕಾರ, ಹೋಮ ಹವನಾದಿಗಳು ನಡೆಯುತ್ತವೆ ಎಂದರು. ಒಂದೊಂದು ದಿನ ಸಂಜೆ ಪಂಚೋಪಚಾರ ಪೂಜಾ ಬಲಿದಾನ ವೃಷಭೋತ್ಸವ, ಗರುಡೋತ್ಸವ, ಹನುಮೋತ್ಸವ, ಕಲ್ಯಾಣೋತ್ಸವ, ಗಜೋತ್ಸವಗಳ ಮೆರವಣಿಗೆ ನಡೆದು ನಿತ್ಯ ಸೇವಾದಿಗಳು ನಡೆಯುತ್ತವೆ.

ದಿನಾಂಕ 5 ರಂದು ಭಾನುವಾರ ಬೆಳಗ್ಗೆ ಹೋಮ ಹಾಗೂ ಮಹಾ ಪೂರ್ಣಾಹುತಿ, ಬೆಳಗ್ಗೆ 10-50 ಕ್ಕೆ ಶ್ರೀ ಹರಿಹರೇಶ್ವರಸ್ವಾಮಿಯ ರಥ ಪೂಜಾ ಬಲಿದಾನ ರಥಾರೋಹಣ ಮತ್ತು ಮಹಾಮಂಗಳಾರತಿ ನಡೆಯಲಿದೆ. ಪೂಜಾ ಕಾರ್ಯಗಳು ನಾರಾಯಣ ಜೋಯಿಸರ ನೇತೃತ್ವದಲ್ಲಿ ನಡೆಯಲಿವೆ.

ದಿನಾಂಕ 6 ರ ಸೋಮವಾರ ಬೆಳಗ್ಗೆ ಪೂಜಾ ಕಾರ್ಯಗಳು ನಡೆಯಲಿವೆ. ಸಂಜೆ 6-30 ಕ್ಕೆ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಹೆಚ್.ಎಲ್. ಆನಂದ್, ಕಾರ್ಯದರ್ಶಿ ವಾರಿಜಾ ಹೆಚ್. ವೆಂಕಟೇಶ, ಶಿರಸ್ತೇದಾರ ಜಿ. ಕಿರಣ್ ಕುಮಾರ್, ಮುಜರಾಯಿ ನಿರ್ವಾಹಕರಾದ ಸಂಗೀತ ಕೆ. ಜೋಷಿ, ಆರ್.ಐ. ಎಂ. ಮಂಜುನಾಥ್, ಗ್ರಾಮ ಆಡಳಿತಾಧಿಕಾರಿ ಹೆಚ್.ಜಿ.ಹೇಮಂತ್‌ಕುಮಾರ್, ಮಾಜೇನಹಳ್ಳಿ ಶಾನಭೋಗ ಹೆಚ್.ಗಿರೀಶ್, ಕಸಬಾ ಶಾನಭೋಗ ಹೆಚ್.ವಿ. ಹರಿಶಂಕರ್, ಮಾಜೇನಹಳ್ಳಿ ಪಾಟೀಲರು ಜಿ.ಎಸ್. ಚೆನ್ನಬಸಪ್ಪ, ಕಸಬಾ ಪಾಟೀಲರು ಜಿ.ಎಂ. ಲಿಂಗರಾಜ್ ಪಾಟೀಲ್, ಅರ್ಚಕ ಶ್ರೀನಿವಾಸಮೂರ್ತಿ, ಗುರುಪ್ರಸಾದ್ ಮತ್ತಿತರರು ಹಾಜರಿದ್ದರು.

## ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಹಾಲೇಶಪ್ಪ

**(1ನೇ ಪುಟದಿಂದ)** ಬ್ಯಾಂಕಿನ ನಿರ್ದೇಶಕರೂ ಆದ ಶಾಸಕ ಎಸ್.ವಿ. ರಾಮಚಂದ್ರ ಬ್ಯಾಂಕಿನ ಉಪಾಧ್ಯಕ್ಷ ಬಿ. ಶೇಖರಪ್ಪ, ನಿರ್ದೇಶಕರಾದ ಜೆ.ಎಸ್ ವೇಣುಗೋಪಾಲ ರೆಡ್ಡಿ, ಜೆ. ಆರ್. ಷಣ್ಮುಖಪ್ಪ, ಜಗದೀಶಪ್ಪ ಬಣಕಾರ, ಜಿ.ಎನ್. ಸ್ವಾಮಿ, ಕೆಂದಲಹಳ್ಳಿ ಆರ್.ಜಿ. ಶ್ರೀನಿವಾಸ ಮೂರ್ತಿ, ಟಿ.ಜಿ. ಜೀವನ ಪ್ರಕಾಶ್, ಹೆಚ್.ಕೆ. ಪಾಲಾಕ್ಷಪ್ಪ, ಜಿ. ಮುರುಗೇಂದ್ರಪ್ಪ, ಹೆಚ್ ದಿವಾಕರ್, ಜಿಲ್ಲಾ ಸಹಕಾರಿ ಸಂಘಗಳ ಉಪನಿಬಂಧಕರಾದ ಶ್ರೀಮತಿ ಅನ್ನಪೂರ್ಣ, ಸಿಇಓ ತಾವರ್ಯಾ ನಾಯ್ಕ ಈ ವೇಳೆ ಹಾಜರಿದ್ದರು.

# ಉತ್ತಮ ಜನಪ್ರತಿನಿಧಿ ಆಯ್ಕೆ ನಮ್ಮೆಲ್ಲರ ಹೊಣೆ



### ಜಗಳೂರು ತಹಶೀಲ್ದಾರ್ ಸಂತೋಷ್ ಕುಮಾರ್

ಜಗಳೂರು, ಜ.25- ಯಾವುದೇ ಹಣ, ಆಮಿಷಗಳಿಗೆ ಒಳಗಾಗದೆ ಮತದಾನ ಮಾಡಿ ಉತ್ತಮ ಜನಪ್ರತಿನಿಧಿಗಳ ಆಯ್ಕೆ ಮಾಡಿ ಉತ್ತಮ ಸಮಾಜ ನಿರ್ಮಾಣಕ್ಕೆ ಯುವ ಜನಾಂಗ ಮುಂದಾಗಬೇಕು ಎಂದು ತಹಶೀಲ್ದಾರ್ ಸಂತೋಷ್ ಕುಮಾರ್ ತಿಳಿಸಿದರು.

ಪಟ್ಟಣದ ತಾಲ್ಲೂಕು ಕಛೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ "ರಾಷ್ಟ್ರೀಯ ಮತದಾನ ದಿನಾಚರಣೆ" ಕಾರ್ಯಕ್ರಮದಲ್ಲಿ ಅವರು ನೂತನ ಚುನಾವಣೆ ಗುರುತಿನ ಚೀಟಿ ವಿತರಿಸಿ ಅವರು ಮಾತನಾಡಿದರು.

18 ವರ್ಷ ಮೇಲ್ಪಟ್ಟ ಯುವ ಸಮೂಹ ಪವಿತ್ರವಾದ ಮತವನ್ನು ಚಲಾಯಿಸಲು ಅರ್ಜಿ ನಮೂನೆ 6ರಲ್ಲಿ ಆನ್‌ಲೈನ್ ಸಲ್ಲಿಸಿ, ಸಂವಿಧಾನ ಬದ್ಧ ಹಕ್ಕನ್ನು ಸದುಪಯೋಗ ಪಡೆದುಕೊಳ್ಳಬೇಕು. ಉತ್ತಮ ಜನಪ್ರತಿನಿಧಿ ಆಯ್ಕೆ ನಮ್ಮೆಲ್ಲರ ಹೊಣೆ ಎಂದು ಕರೆ ನೀಡಿದರು.

ನ್ಯಾಯಸಮ್ಮತ ಚುನಾವಣೆ ನಡೆಸಲು ಚುನಾವಣಾ ಆಯೋಗ ಜನರಲ್ಲಿ ಜಾಗೃತಿ ಮೂಡಿಸುತ್ತಿದೆ. ಮತದಾನಕ್ಕಿಂತ ಇನ್ನೊಂದಿಲ್ಲ. ನಾನು ಖಚಿತವಾಗಿ ಮತದಾನ ಮಾಡುವೆ' ಎಂಬ ಘೋಷವಾಕ್ಯದೊಂದಿಗೆ ಆಯೋಗ ಜಾಗೃತಿ ಮೂಡಿಸುತ್ತಿದೆ ಎಂದರು.

ಜೆಎಂಎಫ್‌ಸಿ ನ್ಯಾಯಾಲಯದ ಸರ್ಕಾರಿ ಸಹಾಯಕಿ ಡಿ.ರೂಪ ಮಾತನಾಡಿ, ಮತದಾನ ಸಂವಿಧಾನಬದ್ಧ ಹಕ್ಕು, ಯಾವುದೇ ಆಸೆ, ಆಮಿಷಗೊಳಗಾಗಿ ಮತವನ್ನು ಮಾರಾಟ ಮಾಡಬಾರದು ಎಂದರು.

ನಮ್ಮನ್ನಾಳುವ ಉತ್ತಮ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಸಂಪೂರ್ಣ ಅಧಿಕಾರ ಮತದಾರನಿಗಿದೆ. ಆದರೆ ಕ್ಷಣಿಕವಾದ ಹಣ, ಇತರೆ ಆಮಿಷಗಳಿಗೆ ಅಮೂಲ್ಯ ಮತವನ್ನು ಮಾರಿಕೊಳ್ಳದೆ. ಉತ್ತಮ ನಾಯಕನನ್ನು ಚುನಾವಣೆಯಲ್ಲಿ ಗೆಲ್ಲಿಸಿ, ಸಾಮಾಜಿಕ ಭದ್ರತೆ ಕಾಪಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಸಮಾರಂಭದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಮಹೇಶ್ವರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ ಸೇರಿದಂತೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಪಿ.ಎಸ್.ಐ. ಲಂಚ ಆರೋಪ ನ್ಯಾಯಾಂಗ ತನಿಖೆಗೆ ಆಗ್ರಹ

ಬೆಂಗಳೂರು, ಜ. 25 - ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಿಂದ ಪಾರು ಮಾಡಲು ಸಿಐಡಿ, ಡಿವೈಎಸ್‌ಪಿ ಶಂಕರಗೌಡ ಪಾಟೀಲ್ ಅವರಿಗೆ 76 ಲಕ್ಷ ನೀಡಿರುವುದಾಗಿ ಆರೋಪಿ ಆರ್.ಡಿ. ಪಾಟೀಲ್ ನೀಡಿರುವ ಹೇಳಿಕೆಯ ಬಗ್ಗೆ ಹೈಕೋರ್ಟ್ ಹಾಲಿ ನ್ಯಾಯಮೂರ್ತಿಗಳಿಂದ ತನಿಖೆ ನಡೆಸಬೇಕೆಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾಟೀಲ್ ಈ ಬಗ್ಗೆ ಲೋಕಾಯುಕ್ತಕ್ಕೆ ಪತ್ರ ಬರೆದು ತನಿಖಾಧಿಕಾರಿ ತಮ್ಮಿಂದ ಮೂರು ಕೋಟಿ ಲಂಚ ಕೇಳಿದ್ದರು ಎಂದು ಆರೋಪಿಸಿ, ಪ್ರಕರಣ ಮುಚ್ಚಿ ಹಾಕಲು 76 ಲಕ್ಷ ಹಣ ಕೊಟ್ಟಿರುವುದಾಗಿ ಬಹಿರಂಗಪಡಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗೃಹ ಸಚಿವ ಆರಗ ಜ್ಞಾನೇಂದ್ರ, ಪ್ರಕರಣ ಮುಚ್ಚಿ ಹಾಕಲು ಯತ್ನಿಸಿದ್ದಾರೆ ಎಂದು ದೂರಿದರು.

ಕರ್ನಾಟಕದಲ್ಲಿ ಮುಖ್ಯಮಂತ್ರಿ ಹುದ್ದೆಯ ಹೆಸರನ್ನು ಬದಲಿಸಬೇಕಿದೆ. ಬಸವರಾಜ ಬೊಮ್ಮಾಯಿ ಹಾಗೂ ಅವರ ಸಚಿವರು ರಾಜ್ಯದ ಯುವಕರ ಭವಿಷ್ಯವನ್ನು ಪ್ರತಿ ನಿತ್ಯ ಸರ್ವನಾಶ ಮಾಡುತ್ತಿದ್ದಾರೆ ಎಂದವರು ಆಕ್ರೋಶ ವ್ಯಕ್ತಪಡಿಸಿದರು.

ಬೊಮ್ಮಾಯಿ ಅವರು ರಾಜ್ಯದ ಯುವ ಜನರಿಗೆ 1 ಲಕ್ಷ ಉದ್ಯೋಗ ನೀಡುವ ಭರವಸೆ ನೀಡಿದ್ದರು. ಆದರೆ ಸರ್ಕಾರದ ಇಲಾಖೆಗಳಲ್ಲಿ ಒಟ್ಟು 2.50 ಲಕ್ಷ ಹುದ್ದೆಗಳು ಖಾಲಿ ಇದ್ದು, ಅವರ ಆಡಳಿತದಲ್ಲಿ 1300 ಕೈಗಾರಿಕಾ ಕೇಂದ್ರಗಳು ಬಂದ್ ಆಗಿದ್ದು ಇದರ ಪರಿಣಾಮವಾಗಿ 1 ಲಕ್ಷ ಉದ್ಯೋಗಗಳು ನಷ್ಟವಾಗಿವೆ ಎಂದರು.



# ಬೆಡ್‌ಗಳು ಬರೋಬ್ಬರಿ ಸಿಬ್ಬಂದೀನೇ ಇಲ್ಲಾರಿ!

**(1ನೇ ಪುಟದಿಂದ)** ಅಧೀಕ್ಷಕ ಡಾ. ಎಸ್. ಷಣ್ಮುಖಪ್ಪ, ಕೊರೊನಾ ಅವಧಿಯ ಬಾಡಿಗೆಗೆ ವಿನಾಯಿತಿ ನೀಡುವಂತೆ ಕ್ಯಾಂಟೀನ್, ಔಷಧಿ ಅಂಗಡಿ, ಧರ್ಮಶಾಲೆ ಹಾಗೂ ಸೈಕಲ್ ಸ್ಟ್ಯಾಂಡ್‌ಗಳವರು ಕೇಳಿದ್ದಾರೆ ಎಂದರು. ಸೂಕ್ತ ಪ್ರಮಾಣದ ವಿನಾಯಿತಿ ನೀಡುವಂತೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅವರಿಗೆ ಸಚಿವ ಭೈರತಿ ಸೂಚಿಸಿದರು.

ನಗರದ ಹಳೆ ಭಾಗದಲ್ಲಿರುವ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಮೊದಲ ಮಹಡಿಯಲ್ಲಿ ಶಸ್ತ್ರಚಿಕಿತ್ಸಾ ಹಾಗೂ ಹೆರಿಗೆ ವಿಭಾಗ ಆರಂಭಿಸಲಾಗಿದೆ. ಇದಕ್ಕಾಗಿ ಲಿಫ್ಟ್ ಹಾಗೂ 100 ಕೆ.ವಿ. ಸಾಮರ್ಥ್ಯದ ಜನರೇಟರ್ ಅಗತ್ಯವಿದೆ ಎಂದು ಆಸ್ಪತ್ರೆಯ ಅಧೀಕ್ಷಕ ಡಾ. ಮಧು ತಿಳಿಸಿದರು.

ಹೆರಿಗೆ ಆಸ್ಪತ್ರೆಗೆ ಬರುವ ಜನರು ಕುಳಿತುಕೊಳ್ಳಲು ಹಾಗೂ ಊಟ ಮಾಡಲಿಕ್ಕೂ ಜಾಗವಿಲ್ಲ. ಈ ಸಮಸ್ಯೆ ಬಗೆಹರಿಸಬೇಕು ಎಂದು ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಹೇಳಿದರು.

ಸರ್ಕಾರಿ ಆಸ್ಪತ್ರೆಗಳಿಗೆ ಬಡವರು ಹೆಚ್ಚಾಗಿ ಬರುತ್ತಾರೆ. ಇವರಿಗೆ ಆದ್ಯತೆ ಮೇಲೆ ಸೌಲಭ್ಯ ಕಲ್ಪಿಸುವುದು ಸರ್ಕಾರದ ಕರ್ತವ್ಯ. ಅಗತ್ಯ ಸೌಲಭ್ಯಗಳ ಕುರಿತು ಕ್ರಮ ತೆಗೆದುಕೊಳ್ಳಬೇಕೆಂದು ಸಚಿವ ಭೈರತಿ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಜಿ.ಪಂ. ಸಿಇಒ ಚೆನ್ನಪ್ಪ, ಎಸ್.ಪಿ. ಸಿ.ಬಿ. ರಿಷ್ಯಂತ್, ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ, ಪಾಲಿಕೆ ಆಯುಕ್ತೆ ರೇಣುಕಾ, ಉಪವಿಭಾಗಾಧಿಕಾರಿ ದುರ್ಗಾಶ್ರೀ, ಜಿಲ್ಲಾ ವೈದ್ಯಾಧಿಕಾರಿ ಡಾ. ನಾಗರಾಜ್, ಸಿ.ಜಿ. ಆಸ್ಪತ್ರೆ ನಿವಾಸಿ ವೈದ್ಯಾಧಿಕಾರಿ ಡಾ. ಮಂಜುನಾಥ ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

## ಹಾಸನದಿಂದ ಭವಾನಿ ಸ್ಪರ್ಧೆ ಇಲ್ಲ

ಬೆಂಗಳೂರು, ಜ. 25 - ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಭವಾನಿ ರೇವಣ್ಣ ಅವರ ಸ್ಪರ್ಧೆ ಇಲ್ಲ ಎಂದು ಜೆಡಿಎಸ್‌ನ ಹಿರಿಯ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಭವಾನಿ ರೇವಣ್ಣ ನಿನ್ನೆಯಷ್ಟೇ ತಾವು ಹಾಸನದಿಂದ ಸ್ಪರ್ಧಿಸುವುದಾಗಿ ಹೇಳಿಕೆ ನೀಡಿದ ಬೆನ್ನಲ್ಲೇ ಕುಮಾರಸ್ವಾಮಿ ಇಂತಹ ಹೇಳಿಕೆ ನೀಡಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಪಂಚರತ್ನ ಯಾತ್ರೆ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿಯೊಬ್ಬರಿಗೂ ಚುನಾವಣೆಗೆ ನಿಲ್ಲಬೇಕು ಎನ್ನುವ ಆಕಾಂಕ್ಷೆ ಇರುವುದು ಸಹಜ. ಭವಾನಿ ರೇವಣ್ಣ ಅವರ ಅನಿವಾರ್ಯತೆ ಆ ಕ್ಷೇತ್ರದಲ್ಲಿ ಇದ್ದಿದ್ದರೆ ನಾನೇ ಸ್ಪರ್ಧೆ ಮಾಡುವಂತೆ ಹೇಳುತ್ತಿದ್ದೆ. ಅವರು ಅಭ್ಯರ್ಥಿ ಅಗಬೇಕು ಎನ್ನುವ ಅನಿವಾರ್ಯತೆ ಇದ್ದಿದ್ದರೆ ನಾನೇ ನಿಲ್ಲಿಸುತ್ತಿದ್ದೆ. ಆದರೆ, ಹಾಸನದಲ್ಲಿ ಇವತ್ತು ಅಂತಹ ಅನಿವಾರ್ಯತೆ ಇಲ್ಲ ಎಂದಿದ್ದಾರೆ. ಆ ಮೂಲಕ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಟಿಕೆಟ್ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಭವಾನಿ ರೇವಣ್ಣ ಹಾಸನ ವಿಧಾನಸಭಾ ಕ್ಷೇತ್ರದ ಕೆಲವು ಭಾಗಗಳಲ್ಲಿ ಮಿಂಚಿನ ಸಂಚಾರ ನಡೆಸಿ, ಕಾರ್ಯಕರ್ತರ ಒತ್ತಾಯದ ಮೇರೆಗೆ ತಾವು ಮುಂದಿನ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಹೇಳಿಕೆ ನೀಡಿದ್ದರು. ಇದರ ಬೆನ್ನಲ್ಲೇ ಕುಮಾರಸ್ವಾಮಿ ಹೇಳಿಕೆ ನೀಡಿ ಸ್ಪಷ್ಟಪಡಿಸಿದ್ದಾರೆ.

## 40% ಕಮಿಷನ್: ಪ್ರಮಾಣಕ್ಕೆ ಸಿದ್ಧ

**(1ನೇ ಪುಟದಿಂದ)** ಯೂ ಕಾಂಗ್ರೆಸ್‌ನವರು ಹಗುರವಾಗಿ ಮಾತನಾಡುತ್ತಾರೆ. ಮುಖ್ಯಮಂತ್ರಿಗಳ ಬಗ್ಗೆ ತಾಕತ್ತು ಧಮ್ ಬಗ್ಗೆ ಮಾತನಾಡುತ್ತಿದ್ದಾರೆ. ನಮಗೆ ತಾಕತ್ತು ಇರುವುದರಿಂದಲೇ ನಾವು ಕೆಲಸ ಮಾಡುತ್ತಿರುವುದು. ಹೀಗೆ ಗಾಳಿಯಲ್ಲಿ ಗುಂಡು ಹಾರಿಸುವ ಪ್ರಯತ್ನ ಬೇಡ. ನಾಡಿನ ಜನ ಏನು ತೀರ್ಮಾನ ಕೈ ಗೊಳ್ಳುತ್ತಾರೋ ಅದಕ್ಕೆ ನಾವೆಲ್ಲರೂ ತಲೆ ಬಾಗಬೇಕು ಎಂದರು.

ಸಿದ್ದರಾಮಯ್ಯ ಯಾವ ಕ್ಷೇತ್ರದಿಂದಲಾದರೂ ಸ್ಪರ್ಧೆ ಮಾಡಲಿ. ಆದರೆ ಮಾಜಿ ಮುಖ್ಯಮಂತ್ರಿಗಳಾಗಿರುವ ಅವರು ವಾಸ್ತವಿಕತೆಗೆ ಹತ್ತಿರವಾಗಿ ಮಾತನಾಡ ಬೇಕೆಂದು ಸಲಹೆ ನೀಡಿದರು.

ರಾಜ್ಯದಲ್ಲಿ ಸಾವಿರಾರು ಕೋಟಿ ರೂ. ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ. ಮೈಸೂರು- ಬೆಂಗಳೂರು, ಚಿಕ್ಕಬಳ್ಳಾಪುರ - ಡಾಬಸ್ ಪೇಟೆ ಹೀಗೆ ಅನೇಕ ರಾಷ್ಟ್ರೀಯ ಹೆದ್ದಾರಿಗಳ ಯೋಜನೆ ಕಾರ್ಯಗತ ಗೊಂಡಿವೆ.

ದಾವಣಗೆರೆ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಮತ್ತು ಕೈಗಾರಿಕಾ ಕಾರಿಡಾರ್ ನಿರ್ಮಾಣ ಸಂಬಂಧದಲ್ಲಿ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದರು.

# ಮೆಡಿಕಲ್ ಕಾಲೇಜು ಸ್ಥಾಪನೆಗೆ ಅಂತಿಮ ಮುದ್ರೆ ಬಾಕಿ

**(1ನೇ ಪುಟದಿಂದ)** ಮಧ್ಯ ಕರ್ನಾಟಕವಾಗಿರುವ ದಾವಣಗೆರೆಯು ರಾಜ್ಯದ ಹೃದಯ ಭಾಗವಾಗಿರುವುದರಿಂದ ಹಾವೇರಿ, ಹೊಸಪೇಟೆ ಈ ಭಾಗಗಳಿಂದಲೂ ಜನ ಚಿಕಿತ್ಸೆಗಾಗಿ ಆಗಮಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ದಾವಣಗೆರೆ ಜಿಲ್ಲೆಗೆ ಸರ್ಕಾರಿ ಮೆಡಿಕಲ್ ಕಾಲೇಜು ಅತ್ಯವಶ್ಯಕವಾಗಿದ್ದು, ಕಾಲೇಜು ಬೇಕೇ ಬೇಕು ಎಂದು ರಾಜ್ಯ ಸರ್ಕಾರಕ್ಕೆ ಜಿಲ್ಲಾ ಸಚಿವನಾಗಿ ನಾನು ಈಗಾಗಲೇ ಒತ್ತಾಯವನ್ನು ಮಾಡಿದ್ದೇನೆ. ಮೆಡಿಕಲ್ ಕಾಲೇಜು ಸ್ಥಾಪನೆಗೆ ಅಂತಿಮವಾಗಿ ಮುದ್ರೆ ಬೀಳಬೇಕಾಗಿದ್ದು, ಅದು ಆಗಲಿದೆ ಎಂಬ ಭರವಸೆ ನೀಡಿದರು.

ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ನೇತೃತ್ವದ ಬದಲಿಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದಲ್ಲಿ ಮುಂಬರುವ ಚುನಾವಣೆಯನ್ನು ಎದುರಿಸುವುದಾಗಿ ಬಿಜೆಪಿ ಪಕ್ಷದ 70 ಜನ ಹೈಕಮಾಂಡ್‌ಗೆ ಪತ್ರ ನೀಡಿರುವ ವಿಚಾರವಾಗಿ ಪ್ರಶ್ನೆಗೆ ಪ್ರತಿಕ್ರಿಸಿದ ಸಚಿವರು, ಈ ರೀತಿಯಾದಂತದ್ದು ಯಾವುದೂ ಇಲ್ಲ. ನಾವೆಲ್ಲ ಒಟ್ಟಾಗಿ ಸೇರಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿಯಾಗಲೀ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಆಗಲೀ, ನಾವುಗಲಾಗಲೀ ಎಲ್ಲರೂ ಒಗ್ಗಟ್ಟಾಗಿ ಸಾಮೂಹಿಕ ನಾಯಕತ್ವದಲ್ಲಿ ಅಮಿತ್ ಶಾ, ಜೆ.ಪಿ. ನಡ್ಡಾ, ನರೇಂದ್ರ ಮೋದಿ ನೇತೃತ್ವದಲ್ಲಿ ಮುಂಬರುವ ಚುನಾವಣೆಯನ್ನು ಎದುರಿಸಲಿದ್ದು, ಮುಂದಿನ ದಿನಗಳಲ್ಲಿ ನಮ್ಮ ಬಿಜೆಪಿ ಪಕ್ಷವೇ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದರಲ್ಲಿ ಯಾವುದೇ ಸಂಶಯವಿಲ್ಲ. ನಮ್ಮ ಬಿಜೆಪಿ ಸರ್ಕಾರ, ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ, ಪ್ರಧಾನಿ ನರೇಂದ್ರ ಮೋದಿ ಅವರ ಜನಪರ ಯೋಜನೆಗಳಿಗೆ ಮೆಚ್ಚಿ ನಮಗೆ ಜನ ಬೆಂಬಲವಾಗಿ ನಿಂತಿದ್ದಾರೆ ಎಂದರು.

ನಾನಂತೂ ಯಾವುದೇ ಕಾರಣಕ್ಕೂ ಕಾಂಗ್ರೆಸ್‌ಗೆ ವಾಪಾಸ್ ಹೋಗೋದಿಲ್ಲ.ಈಗಾಗಲೇ ಈ ಕುರಿತು ಸಾಕಷ್ಟು ಬಾರಿ ಹೇಳಿದ್ದೇನೆ.ನನಗೆ ಬಿಜೆಪಿ ಎಲ್ಲವನ್ನೂ ಕೊಟ್ಟಿದೆ.

ಬಿಜೆಪಿಗೆ ಬಂದ 17 ಜನರಲ್ಲಿ ಒಂದಿಬ್ಬರು ಹೋಗಬಹುದೇನೋ, ಆದರೆ ನಾನಂತು ಕಾಂಗ್ರೆಸ್‌ಗೆ ಹೋಗುವುದಿಲ್ಲ. ಇಲ್ಲಿ ನನಗೆ ಒಳ್ಳೆಯ ಗೌರವ ಇದೆ. ಅಧಿಕಾರ ಇರಲಿ, ಇಲ್ಲದಿರಲಿ ನಿಷ್ಠಾವಂತ ಕಾರ್ಯಕರ್ತನಾಗಿ ದುಡಿಯುತ್ತೇನೆ ಎಂದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶೀಘ್ರವೇ ದಾವಣಗೆರೆಗೆ ಆಗಮಿಸಲಿದ್ದಾರೆ . ಬಿಜೆಪಿ ಸಂಘಟನೆ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವರು ನಗರಕ್ಕೆ ಭೇಟಿ ನೀಡಲಿದ್ದಾರೆ. ಅವರ ಭೇಟಿಯ ದಿನಾಂಕ ಇನ್ನೂ ನಿಗದಿಗೊಂಡಿಲ್ಲವಾದರೂ ಅವರ ಭದ್ರತೆ ಕುರಿತು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯೊಂದಿಗೆ ಚರ್ಚೆ ನಡೆಲಾಗುವುದು ಎಂದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಎಸ್ಪಿ ಸಿ.ಬಿ. ರಿಷ್ಯಂತ್, ಮೇಯರ್ ಜಯಮ್ಮ ಗೋಪಿನಾಯ್ಕ, ದೂಡಾ ಅಧ್ಯಕ್ಷ ಎ.ವೈ. ಪ್ರಕಾಶ್, ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಉಪ ವಿಭಾಗಾಧಿಕಾರಿ ದುರ್ಗಾಶ್ರೀ, ದೂಡಾ ಆಯುಕ್ತ ಕುಮಾರಸ್ವಾಮಿ ಸೇರಿದಂತೆ ಇತರರು ಇದ್ದರು.

# 106 ಸಾಧಕರಿಗೆ 'ಪದ್ಮ' ಗೌರವ

**(1ನೇ ಪುಟದಿಂದ)** ಹಾಗೂ 91 ಸಾಧಕರಿಗೆ ಪದ್ಮಶ್ರೀ ಪ್ರಶಸ್ತಿ ಪ್ರಕಟಿಸಲಾಗಿದೆ. ಇವರಲ್ಲಿ 19 ಮಹಿಳೆಯರು ಹಾಗೂ ಇಬ್ಬರು ವಿದೇಶಿಯರು ಸೇರಿದ್ದಾರೆ. ಏಳು ಜನರಿಗೆ ಮರಣೋತ್ತರವಾಗಿ ಪ್ರಶಸ್ತಿ ನೀಡಲಾಗಿದೆ.

ಅಮೆರಿಕದ ಗಣಿತಶಾಸ್ತ್ರಜ್ಞ ಶ್ರೀನಿವಾಸ ವರಧನ್ ಅವರು ಪದ್ಮ ವಿಭೂಷಣ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್, ವೈದ್ಯಕೀಯ ವಲಯದಲ್ಲಿ ಸೇವೆ ಸಲ್ಲಿಸಿದ ದಿಲೀಪ್ ಮಹಲನಬಿಸ್ ಹಾಗೂ ಹೆಸರಾಂತ ವಾಸ್ತುಶಿಲ್ಪಿ ಬಾಲಕೃಷ್ಣ ದೋಷಿ ಮರಣೋತ್ತರವಾಗಿ ಪದ್ಮವಿಭೂಷಣಕ್ಕೆ ಪಾತ್ರರಾಗಿದ್ದಾರೆ. ಈ ಬಾರಿ ಯಾರಿಗೂ ಭಾರತ ರತ್ನ ನೀಡಿಲ್ಲ.

ಹೆಸರಾಂತ ಉದ್ಯಮಿ ಕುಮಾರ ಮಂಗಳಂ ಬಿರ್ಲಾ, ಕಾದಂಬರಿಕಾರ ಎಸ್.ಎಲ್. ಭೈರಪ್ಪ ಹಾಗೂ ಸಾಹಿತಿ ಸುಧಾ ಮೂರ್ತಿ ಸೇರಿದಂತೆ ಒಂಭತ್ತು ಸಾಧಕರಿಗೆ ಪದ್ಮಭೂಷಣ ಪ್ರಶಸ್ತಿ ನೀಡಲಾಗಿದೆ.

ರಾಕೇಶ್ ಝುನ್‌ಝುನ್‌ವಾಲ, ಸಂಗೀತ ನಿರ್ದೇಶಕ ಎಂ.ಎಂ. ಕೀರವಾಣಿ, ಗಾಯಕಿ ವಾಣಿ ಜಯರಾಮ್, ನಟಿ ರವೀನಾ ಟಂಡನ್, ಮಣಿಪುರ ಬಿಜೆಪಿ ಅಧ್ಯಕ್ಷ ಥೊನಜಮ್ ಛೋಬ ಸಿಂಗ್ ಸೇರಿದಂತೆ 91 ಜನರಿಗೆ ಪದ್ಮ ಶ್ರೀ ನೀಡಲಾಗಿದೆ.

## ಆಯುಕ್ತರಾಗಿ ಬಸನಗೌಡ ಕೋಟೂರ

**(1ನೇ ಪುಟದಿಂದ)** ಈವರೆಗೂ ದೂಡಾ ಆಯುಕ್ತರಾಗಿದ್ದ ಬಿ.ಟಿ. ಕುಮಾರಸ್ವಾಮಿ ಅವರನ್ನು ಮುಂದಿನ ಆದೇಶವರೆಗೆ ಸಿಬ್ಬಂದಿ ಆಡಳಿತ ಮತ್ತು ಸುಧಾರಣೆ ಇಲಾಖೆ ಕಚೇರಿಯಲ್ಲಿ ವರದಿ ಮಾಡಿಕೊಳ್ಳುವಂತೆ ಸರ್ಕಾರ ನಿರ್ದೇಶಿಸಿದೆ. ಬಸನಗೌಡ ಕೋಟೂರ ಅವರು ಈವರೆಗೂ ಕೊಳಗೇರಿ ಅಭಿವೃದ್ಧಿ ಮಂಡಳಿ (ಬೆಂಗಳೂರು) ಕಾರ್ಯದರ್ಶಿಯಾಗಿದ್ದರು.

## ಮಾರುಕಟ್ಟೆ ಬಿಡುಗಡೆಗೆ ನಿರ್ಧಾರ

**(1ನೇ ಪುಟದಿಂದ)** ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಲಿದೆ ಎಂದು ಕೇಂದ್ರ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ಅವರು ಜನವರಿ 19ರಂದು ತಿಳಿಸಿದ್ದರು. ಬೆಲೆ ನಿಯಂತ್ರಿಸುವ ಸಲುವಾಗಿ ಕೇಂದ್ರ ಸರ್ಕಾರ ಗೋಧಿ ರಫ್ತಿನ ಮೇಲೆ ನಿಷೇಧ ಹೇರಿದೆ. ಬರುವ ಏಪ್ರಿಲ್‌ನಿಂದ ಗೋಧಿ ಇಳುವರಿ ಮಾರುಕಟ್ಟೆಗೆ ಬರಲಿದೆ.

## ಕೃಷ್ಣಗೆ ಪದ್ಮವಿಭೂಷಣ, ಭೈರಪ್ಪ, ಸುಧಾ ಮೂರ್ತಿಗೆ ಪದ್ಮಭೂಷಣ

**(1ನೇ ಪುಟದಿಂದ)** ನಾಡೋಜ ಪಿಂಡಿಪಾಪನಹಳ್ಳಿ ಮುನಿ ವೆಂಕಟಪ್ಪ, ಷಾ ರಶೀದ್ ಅಹಮದ್ ಖಾದ್ರಿ ಹಾಗೂ ಪುರಾತತ್ವ ಶಾಸ್ತ್ರ ವಿಭಾಗದಲ್ಲಿ ಸುಬ್ಬರಾಮನ್ ಪದ್ಮ ಪ್ರಶಸ್ತಿ ಪಡೆದಿದ್ದಾರೆ.


## 46ನೇ ವರ್ಷದ ಸ್ಮರಣೆ



**ದಿ|| ಶ್ರೀ ಅವಲಕ್ಕಿ ಭೀಮಣ್ಣ ಯರಗಲ್**

*(ಅವಲಕ್ಕಿ ಕೈಗಾರಿಕೆಯ ಜನಕ, ದಾವಣಗೆರೆ ಜಿಲ್ಲೆ)*

ಅಪ್ಪಾ ಇಂದಿಗೆ ನೀವು ನಮ್ಮನ್ನು ಅಗಲಿ 46 ವರ್ಷಗಳಾದವು.
ನೀವು ಹಾಕಿಕೊಟ್ಟ ಮಾರ್ಗದಲ್ಲಿ ಇಂದಿಗೂ ಶ್ರದ್ಧೆಯಿಂದ ನಡೆಯುತ್ತಿರುವ,

ನಿಮ್ಮ ಪ್ರೀತಿಯ ಮಗ **ವಿಜಯಕುಮಾರ್ ಯರಗಲ್**
ಮಾಲೀಕರು, ಪ್ರಿಯದರ್ಶಿನಿ ರೈಸ್‌ಮಿಲ್ ಮತ್ತು ಪ್ರಿಯದರ್ಶಿನಿ ಪೋಹಾ ಇಂಡಸ್ಟ್ರೀಸ್
ಸೊಸೆಯಂದಿರು, **ಜೀವಿಕ ಈಶಣ್ಣ ಯರಗಲ್,**
**ಶ್ರೀಮತಿ ಲಲಿತಾ ವಿಜಯಕುಮಾರ್ ಯರಗಲ್,**
ಮೊಮ್ಮಕ್ಕಳು, **ಶ್ರೀಮತಿ ವಾಣಿ, ಶ್ರೀ ಲೋಹಿತ್ ಈಶಣ್ಣ ಯರಗಲ್,**
**ಶ್ರೀಮತಿ ಅಂಜು, ಶ್ರೀ ಭೀಮಾನಂದ ವಿಜಯಕುಮಾರ್ ಯರಗಲ್,**
**ರಿಷಾನ್, ಶ್ರೀಯಾ, ತ್ರಿಶಿಕಾ**
ಯರಗಲ್ ವಂಶಸ್ಥರು, ಮಕ್ಕಳು, ಮೊಮ್ಮಕ್ಕಳು ಮತ್ತು ಅಳಿಯಂದಿರು

## 22 ನೇ ವರ್ಷದ ಪುಣ್ಯಸ್ಮರಣೆ



**ಎನ್.ಎಂ.ಗುರುಸ್ವಾಮಿ,** ಎಲ್.ಟಿ.(ಕಬ್ಸ್)
ಜನನ: 16.12.1930, ಮರಣ: 26.01.2001
ನೀವು ನಮ್ಮನ್ನಗಲಿ ಇಂದಿಗೆ 22 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ ಇದ್ದು, ನಿಮ್ಮ ಆದರ್ಶಗಳನ್ನು ಪಾಲಿಸುತ್ತಾ ಮುನ್ನಡೆಯುತ್ತಿರುವ,
**ದುಃಖತಪ್ತ ಕುಟುಂಬದವರು,**
**ಬಂಧು-ಮಿತ್ರರು ಮತ್ತು**
**ಸ್ಕೌಟ್ಸ್ ಸಂಸ್ಥೆಯ ಸದಭಿಮಾನಿಗಳು.**

|| ಶ್ರೀ ಶಿವ ನಾರದಮುನಿ ಪ್ರಸನ್ನ ||

## 16ನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ನಂಜಮ್ಮ ದಿ|| ಶ್ರೀ ಬಸಪ್ಪ ಬಸವನಗೌಡ್ರು**
ಗಾಂಧಿ ನಗರ

ನೀವು ನಮ್ಮನ್ನಗಲಿ ಇಂದಿಗೆ 16 ವರ್ಷಗಳಾದವು. ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ,
✦ ಜಿ.ಬಿ. ನಟರಾಜ್ ✦ ಜಿ.ಬಿ. ನಾಗರಾಜ್ ಮತ್ತು
✦ ಡಾ|| ಚಂದ್ರನಾಥ್, ಗಾಂಧಿನಗರ. ✦ ನಟರಾಜ ಪ್ರಾವಿಜನ್ ಸ್ಟೋರ್ಸ್
✦ ನಟರಾಜ ಎಂಟರ್‌ಪ್ರೈಸಸ್, ಚಾಮರಾಜಪೇಟೆ, ದಾವಣಗೆರೆ.
✦ ನಂಜಮ್ಮ ಹಾಸ್ಪಿಟಲ್, ಮಾಲೂರು.


## ಯಲವಟ್ಟಿ : ಇಂದು ಸಂವಿಧಾನ ದಿನಾಚರಣೆ


ಇಂದು ಬೆಳಿಗ್ಗೆ 11 ಗಂಟೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಶಾಖೆ ಉದ್ಘಾಟನೆ ಹಾಗೂ 74 ನೇ ಸಂವಿಧಾನ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಸಂಚಾಲಕ ಪಿ.ಜೆ. ಮಹಾಂತೇಶ್ ತಿಳಿಸಿದ್ದಾರೆ.


## ಡಿ. ಗೋಣಿಬಸಪ್ಪ ನಿಧನ



ದಾವಣಗೆರೆ ನಿಜಲಿಂಗಪ್ಪ ಬಡಾವಣೆ ನಿವಾಸಿ, ಪೊಲೀಸ್ ಇಲಾಖೆಯ ನಿವೃತ್ತ ಶಾಖಾಧೀಕ್ಷಕರಾದ
**ಡೊಳ್ಳಿನವರ ಡಿ. ಗೋಣಿಬಸಪ್ಪ(73)**
ಇವರು ದಿನಾಂಕ 25.01.2023ರ ಬುಧವಾರ ಮಧ್ಯಾಹ್ನ ಹೃದಯಾಘಾತದಿಂದ ನಿಧನರಾದರು. ದಾವಣಗೆರೆ ನಗರದ ನಿಜಲಿಂಗಪ್ಪ ಬಡಾವಣೆಯ ಅಮೃತಾನಂದಮಯಿ ಶಾಲೆ ಎದುರಿನ 10ನೇ ಕ್ರಾಸ್ ಬಳಿಯ ನಿವಾಸದಲ್ಲಿ ಬುಧವಾರ ರಾತ್ರಿವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಿ, ಬಳಿಕ ಹುಟ್ಟೂರಿಗೆ ಪಾರ್ಥಿವ ಶರೀರ ತೆಗೆದುಕೊಂಡು ಹೋಗಲಾಯಿತು. ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗ ಹೊಂದಿರುವ ಮೃತರ ಅಂತ್ಯಕ್ರಿಯೆ ದಿನಾಂಕ 26.1.2023ರ ಗುರುವಾರ ಮಧ್ಯಾಹ್ನ 12ಗಂಟೆಗೆ ಸ್ವಗ್ರಾಮ ವಿಜಯನಗರ ಜಿ. ಹೂವಿನಹಡಗಲಿ ತಾಲ್ಲೂಕಿನ ಕೊಯಿಲಾರಗಟ್ಟೆ ಗ್ರಾಮದಲ್ಲಿ ನೆರವೇರಲಿದೆ.
**ದುಃಖತಪ್ತ ಕುಟುಂಬ ವರ್ಗ**

## ದ್ವಿತೀಯ ವರ್ಷದ ಪುಣ್ಯಸ್ಮರಣೆ



ಹರಿಹರದ ಹೊಸ ಭರಂಪುರ ನಿವಾಸಿಗಳಾದ ಕಿರ್ಲೋಸ್ಕರ್ ಕಂಪನಿಯ ನಿವೃತ್ತ ನೌಕರರಾಗಿದ್ದ
**ಶ್ರೀ ಮುಕ್ತೇನಹಳ್ಳಿ ಮಠದ ಎಂ. ಸದಾಶಿವಯ್ಯನವರು**
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದರೂ ಸದಾ ನಿಮ್ಮ ಸ್ಮರಣೆಯಲ್ಲಿರುವ...

**ಶ್ರೀಮತಿ ನೀಲಮ್ಮ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳು ಹಾಗೂ ಮಿತ್ರರು.**
ಹೊಸ ಭರಂಪುರ, 2ನೇ ಕ್ರಾಸ್, ಹರಿಹರ.


## ಪಾಕ್ ಉದ್ಯೋಗಿಗಳ ವೇತನ ಕಡಿತಕ್ಕೆ ಶಿಫಾರಸ್ಸು

ಇಸ್ಲಾಮಾಬಾದ್, ಜ. 25 – ಸರ್ಕಾರಿ ಉದ್ಯೋಗಿಗಳ ವೇತನವನ್ನು ಶೇ.10ರಷ್ಟು ಕಡಿತಗೊಳಿಸಲು ಪಾಕಿಸ್ತಾನ ಪರಿಶೀಲಿಸುತ್ತಿದೆ. ಆರ್ಥಿಕ ಸಂಕಷ್ಟಗಳ ಹಿನ್ನೆಲೆಯಲ್ಲಿ ಈ ಕ್ರಮಗಳನ್ನು ತೆಗೆದುಕೊಳ್ಳಲು ಪಾಕ್ ಮುಂದಾಗಿದೆ. ಪ್ರಧಾನ ಮಂತ್ರಿ ಶೆಬಾಜ್ ಷರೀಫ್ ಅವರು ರಚಿಸಿರುವ ರಾಷ್ಟ್ರೀಯ ಉಳಿತಾಯ ಸಮಿತಿಯು ಹಲವಾರು ಕ್ರಮಗಳಿಗೆ ಶಿಫಾರಸ್ಸು ಮಾಡಿದೆ. ಇದರಲ್ಲಿ ಸರ್ಕಾರಿ ನೌಕರರ ವೇತನದಲ್ಲಿ ಶೇ.10ರ ಕಡಿತವೂ ಸೇರಿದೆ ಎಂದು ಜಿಯೋ ನ್ಯೂಸ್ ವರದಿ ಮಾಡಿದೆ. ಸಚಿವಾಲಯಗಳ ವೆಚ್ಚ ವನ್ನು ಶೇ.15ರಷ್ಟು ಕಡಿತ ಮಾಡಲು ಹಾಗೂ ಸಲಹೆಗಾರರ ಸಂಖ್ಯೆಯನ್ನು 78ರಿಂದ 30ಕ್ಕೆ ಇಳಿಸಲು ಸಮಿತಿ ಶಿಫಾರಸ್ಸು ಮಾಡಿದೆ. ಪಾಕಿಸ್ತಾನಕ್ಕೆ ಸಾಲ ನೀಡಲು ಅಂತರ ರಾಷ್ಟ್ರೀಯ ಹಣಕಾಸು ನಿಧಿಯು ಉಳಿತಾಯದ ಷರತ್ತು ವಿಧಿಸಿತ್ತು. ಈ ಬಗ್ಗೆ ಪಾಕಿಸ್ತಾನ ಕ್ರಮ ತೆಗೆದುಕೊಳ್ಳಲು ಮೀನಾಮೇಷ ಎಣಿಸುತ್ತಿತ್ತು. ಹೀಗಾಗಿ ಸಾಲದ ಕಂತು ಬಿಡುಗಡೆ ವಿಳಂಬವಾಗುತ್ತಿದೆ.


Celebrating 33 years
ದಾವಣಗೆರೆ ಜಿಲ್ಲೆಯ ಸಮಸ್ತ ಗ್ರಾಹಕರಿಗೂ ಹಾಗೂ
ಡೀಲರ್ಸ್‌ಗಳಿಗೂ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು
ಭಾರತದ ಅತ್ಯಂತ ವಿಶ್ವಾಸಾರ್ಹ
ಸೋಲಾರ್ ಬ್ರಾಂಡ್
ದೇಶದ ಮೊದಲ ಸ್ಟಾರ್ ರೇಟಿಂಗ್
ಇರುವ ವಾಟರ್ ಹೀಟರ್
ಸರ್ಕಾರದಿಂದ ಮಾನ್ಯತೆ ಪಡೆದಿರುವ
ಬುದ್ಧಿವಂತಿಕೆಯ ಆಲೋಚನೆ
Sudarshan Saur®
www.sudarshansaur.com
MORE STARS MORE SAVINGS
POWER SAVINGS GUIDE
ಕ್ರಿಸ್ಟಲ್ ಬ್ಲ್ಯು ಗ್ಲಾಸ್ ಲೈನಿಂಗ್®
Cyclopentane PUF insulation
Trusted PUF around the world
20% ಹೆಚ್ಚು ಬಿಸಿ ನೀರು
6 ಪಟ್ಟುಹೆಚ್ಚು ದಪ್ಪವಾದ ಟ್ಯಾಂಕ್
ಟ್ಯಾಂಕ್ ಸ್ವಚ್ಛಗೊಳಿಸುವ ಬಾಗಿಲುಗಳು
ಗಡಸು ನೀರಿಗೆ ಸೂಕ್ತವಾದ ಟ್ಯಾಂಕ್
ಶೂನ್ಯ ನಿರ್ವಹಣೆ
3T ಗೋಲ್ಡ್ ಸ್ಟ್ಯಾಂಡರ್ಡ್ ಟ್ಯೂಬ್
*T&C apply.
ಸ್ಟಾರ್. ಸಾಮರ್ಥ್ಯ. ಬಿಸಿ ನೀರು.
10 ವರ್ಷಗಳ ಗ್ಯಾರಂಟಿ*
COMMERCIAL & DOMESTIC RO & UV, UF
AMAZE
ESCORT
AMARON
Zero Maintenance
Improved Safety
High Heat Tolerance
Vibration Resistance
High Cranking Power
Zero Maintenance
High Heat Tolerance
Long Life
42 Months Guarantee*
ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಡೀಲರ್ಸ್ ಬೇಕಾಗಿದ್ದಾರೆ
PEACE ENTERPRISES
SUPER STOCKIST FOR DAVANAGERE DIST.
Ganesh Temple Building, Opp. Bakkeshwara High School, Nijalingappa Layout, Davanagere.
E-mail ID : peacedvgmarketing@gmail.com
8310042490, 9901318277, 8088605375, 7795026926, 9880156667 - 08192403393

# ವಿಶ್ವ ಕನ್ನಡ ಸಮ್ಮೇಳನದ ಆಯೋಜನೆಗೆ ಮನವಿ



ದಾವಣಗೆರೆ, ಜ. 25 - ಸರ್ಕಾರ ಈ ಹಿಂದೆಯೇ ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸಲು ತೀರ್ಮಾನಿಸಿತ್ತು. ಆದರೆ ಕೋವಿಡ್ ಕಾರಣದಿಂದ ಇದುವರೆಗೂ ನಡೆಯಲಾಗಿರುವುದಿಲ್ಲ. ಹಾವೇರಿಯಲ್ಲಿ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ನಿರ್ಣಯ ಕೈಗೊಳ್ಳಲಾಗಿತ್ತು. ಇತ್ತೀಚಿಗೆ ಖಾಸಗಿ ಕಾರ್ಯಕ್ರಮದ ನಿಮಿತ್ತ ದಾವಣಗೆರೆಗೆ ಆಗಮಿಸಿದ್ದ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಷಿ ಅವರಿಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ಅವರು ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸಬೇಕು. ಅದಕ್ಕೆ ಪೂರಕವಾದ ಅನುದಾನ ವನ್ನು ಸರ್ಕಾರ ಮುಂಗಡ ಪತ್ರದಲ್ಲಿ ಮೀಸಲಿಡುವಂತೆ ಸರ್ಕಾರದೊಂದಿಗೆ ತಾವುಗಳು ಮಾತನಾಡಿ, ಒತ್ತಾಯ ಹೇರಬೇಕಾಗಿ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್‌ನ ಸಂಘಟನಾ ಕಾರ್ಯದರ್ಶಿ ಜಿ.ರುದ್ರಯ್ಯ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿ.ಜಿ ಜಗದೀಶ್ ಕೂಲಂಬಿ, ಜಿಲ್ಲಾ ಪದಾಧಿಕಾರಿ ಶ್ರೀಮತಿ ರುದ್ರಾಕ್ಷಿಬಾಯಿ, ತಾಲ್ಲೂಕು ಕಸಾಪ ಅಧ್ಯಕ್ಷೆ ಶ್ರೀಮತಿ ಸುಮತಿ ಜಯಪ್ಪ, ತಾಲ್ಲೂಕು ಪದಾಧಿಕಾರಿಗಳಾದ ಬೇತೂರು ಷಡಕ್ಷರಪ್ಪ, ಆರ್, ಶಿವಕುಮಾರ್, ಸದಾನಂದ ಕುಂಬಳೂರು ಮತ್ತಿತರರು ಉಪಸ್ಥಿತರಿದ್ದರು.

# ಮಲೇಬೆನ್ನೂರಿನಲ್ಲಿ ಮತದಾನದ ಪ್ರತಿಜ್ಞಾ ವಿಧಿ



ಮಲೇಬೆನ್ನೂರು, ಜ. 25- ಇಲ್ಲಿನ ಶ್ರೀ ಬೀರಲಿಂಗೇಶ್ವರ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಪುರಸಭೆ ಮತ್ತು ನಾಡ ಕಛೇರಿ ವತಿಯಿಂದ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮದಲ್ಲಿ ಯುವ ಮತದಾರರಿಗೆ ಮತದಾನದ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಉಪ ತಹಶೀಲ್ದಾರ್ ಆರ್. ರವಿ ಅವರು ವಿದ್ಯಾರ್ಥಿಗಳಿಗೆ ಮತದಾನದ ಹಕ್ಕು ಮತ್ತು ಉದ್ದೇಶವನ್ನು ತಿಳಿಸುವ ಮೂಲಕ ಪ್ರತಿಜ್ಞಾ ವಿಧಿ ಬೋಧಿಸಿದರು. ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ಆರ್. ರಾಜಪ್ಪ, ಪುರಸಭೆ ಸದಸ್ಯ ಸಾಬೀರ್ ಅಲಿ, ಉಪನ್ಯಾಸಕರಾದ ತಿಪ್ಪಣ್ಣ ಕಬ್ಬಾರ್, ಶ್ರೀಮತಿ ಉಮಾ ಬಣಕಾರ್ ಮತ್ತಿತರರು ಈ ವೇಳೆ ಹಾಜರಿದ್ದರು.


## ಮಲೇಬೆನ್ನೂರು : ಇಂದು ಗಣರಾಜ್ಯೋತ್ಸವ

ಇಲ್ಲಿನ ಪುರಸಭೆ ವತಿಯಿಂದ ಇಂದು ಬೆಳಿಗ್ಗೆ 8 ಗಂಟೆಗೆ ಪುರಸಭೆ ಕಛೇರಿ ಮುಂಭಾಗ ಮತ್ತು 8.30ಕ್ಕೆ ಹಳೇ ಸರ್ಕಲ್‌ನಲ್ಲಿ 74ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ವಿ. ಸುರೇಶ್ ತಿಳಿಸಿದ್ದಾರೆ. ನಾಡ ಕಛೇರಿ ಮುಂಭಾಗದಲ್ಲಿ ಉಪ ತಹಶೀಲ್ದಾರ್ ಆರ್. ರವಿ ಅವರು ಬೆಳಿಗ್ಗೆ 8 ಗಂಟೆಗೆ ಧ್ವಜಾರೋಹಣ ಮಾಡಲಿದ್ದಾರೆ.

# ಅರೆಮಜ್ಜಿಗೇರಿ : ಗ್ರಾಮ ದೇವತೆಗಳ ಮೂರ್ತಿ ಪ್ರತಿಷ್ಠಾಪನೆ

ಹರಪನಹಳ್ಳಿ, ಜ.25- ತಾಲ್ಲೂಕಿನ ಅರೆಮಜ್ಜಿಗೇರಿ ಗ್ರಾಮದ ಗ್ರಾಮ ದೇವತೆಗಳಾದ ಬಳ್ಳಾರಿ ದುರುಗಮ್ಮ, ಆದಿಶಕ್ತಿ ದುರುಗಮ್ಮ, ಮಾಯಮ್ಮ, ಮರಿಯಮ್ಮ ದೇವತೆಗಳ ನೂತನ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ಮಂಗಳವಾರ ಮತ್ತು ಬುಧವಾರ ವಿಜೃಂಭಣೆಯಿಂದ ನೆರವೇರಿತು.

ಮಂಗಳವಾರ ಆದಿಶಕ್ತಿ ದುರುಗಮ್ಮ, ಮಾಯಮ್ಮ, ಮರಿಯಮ್ಮ ದೇವರುಗಳ ನೂತನ ಮೂರ್ತಿಗಳಿಗೆ ದುಗ್ಗಾವತಿ ಚಿದಂಬರಂ ಭಟ್ ಅವರ ಸಮುಖದಲ್ಲಿ ಸಂಕಲ್ಪ, ಪುಣ್ಯಾಹವಾಚನ, ಗಣಪತಿ ಪೂಜೆ, ವಾಸ್ತು ಹೋಮ ನಡೆಯಿತು. ಬೆಳಗಿನ ಜಾವ ಬ್ರಾಹ್ಮೀ ಮುಹೂರ್ತದಲ್ಲಿ ಗಂಗಾಪೂಜೆಯೊಂದಿಗೆ ಅದ್ದೂರಿ ಮೆರವಣಿಗೆ ಮೂಲಕ ಪ್ರತಿಷ್ಠಾಪನೆಯ ಪೂಜೆ ಕಾರ್ಯಕ್ರಮ ನೆರವೇರಿತು. ಬುಧವಾರ ಬಳ್ಳಾರಿ ದುರುಗಮ್ಮ ದೇವಿಯ ಮೂರ್ತಿ ಪ್ರತಿಷ್ಠಾಪನೆ ನೆರವೇರಿತು.



ಡೊಳ್ಳು - ವಾದ್ಯಗಳೊಂದಿಗೆ ಗ್ರಾಮದಲ್ಲಿ ಮೂರ್ತಿಗಳ ಭವ್ಯ ಮೆರವಣಿಗೆ ಮೆರವಣಿಗೆಯಲ್ಲಿ ಕಳಸ ಹಿಡಿದು ಮಹಿಳೆಯರು ಮೆರುಗು ನೀಡಿದರು

ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೂ ಮುನ್ನ ನೂತನ ಮೂರ್ತಿಗಳನ್ನು ಗ್ರಾಮಕ್ಕೆ ಭವ್ಯ ಮೆರವಣಿಗೆ ಮೂಲಕ ಗ್ರಾಮಸ್ಥರು ಬರಮಾಡಿಕೊಂಡರು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಡೊಳ್ಳು, ವಾದ್ಯಗಳೊಂದಿಗೆ ಮೆರವಣಿಗೆ ನಡೆಯಿತು. ಮೆರವಣಿಗೆ ಉದ್ದಕ್ಕೂ ಮಹಿಳೆಯರು ಕಳಸ ಹಿಡಿದು ಸಾಗಿದ್ದು, ಮೆರವಣಿಗೆಗೆ ಮೆರುಗು ನೀಡಿದರು.

ನೀಲಗುಂದ ಗುಡ್ಡದ ವಿರಕ್ತಮಠದ ಚನ್ನಬಸವ ಶಿವಯೋಗಿ ಶ್ರೀಗಳು ಬುಧವಾರ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಕ್ತರನ್ನು ಉದ್ದೇಶಿಸಿ ಆಶೀರ್ವಚನ ನೀಡಿದರು. ಹಲುವಾಗಲು ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯೆ ಸುವರ್ಣ ಆರುಂಡಿ ನಾಗರಾಜ ಮೂರ್ತಿ ಪ್ರತಿಷ್ಠಾಪನೆಗೆ ಆಗಮಿಸಿ, ದೇವರ ದರ್ಶನ ಪಡೆದರು.

ಈ ಸಂದರ್ಭದಲ್ಲಿ ಅರ್ಚಕರಾದ ಪಿ. ದೇವೇಂದ್ರಪ್ಪ, ಹೆಚ್.ದುರುಗೇಶಪ್ಪ, ದೇವಸ್ಥಾನಗಳ ಸೇವಾ ಸಮಿತಿ ಗೌರವಾಧ್ಯಕ್ಷ ಎ.ನಿಂಗಪ್ಪ, ಅಧ್ಯಕ್ಷ ಟಿ.ಬಸವರಾಜ, ಖಜಾಂಚಿ ಬಿ.ಗುಡ್ಡಪ್ಪ, ಉಪಾಧ್ಯಕ್ಷ ಪಿ.ಭರಮಪ್ಪ, ಪ್ರಧಾನ ಕಾರ್ಯದರ್ಶಿ ವಿ.ದುರುಗಪ್ಪ, ಆಲೂರು ಜ್ಯೋತೇಶ್, ಗಾಂಜಿ ನಿಂಗಪ್ಪ, ಕೆ.ರೇವಪ್ಪ, ಎಂ.ದಿಳ್ಳೆಪ್ಪ, ಎಚ್.ನಾಗೇಂದ್ರಪ್ಪ, ದುರುಗಪ್ಪ, ಎಚ್.ದೇವೇಂದ್ರಪ್ಪ, ವಿ.ಕರಿಯಪ್ಪ ಸೇರಿದಂತೆ ಗ್ರಾಮಸ್ಥರು ಇದ್ದರು.

# ಬಿಜೆಪಿಯಿಂದ ಭ್ರಷ್ಟಾಚಾರ : ಸಿದ್ದರಾಮಯ್ಯ-ಡಿಕೆಶಿ ದೂರು

ಬೆಂಗಳೂರು, ಜ. 25 - ರಾಜ್ಯದಲ್ಲಿ ಮತ್ತೆ ಅಧಿಕಾರದ ಗದ್ದುಗೆ ಹಿಡಿಯಲು ಬಿಜೆಪಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ 30 ಸಾವಿರ ಕೋಟಿ ರೂ.ಗಳಷ್ಟು ಹಣ ವೆಚ್ಚ ಮಾಡಲು ಮುಂದಾಗಿದೆ ಎಂದು ಪ್ರದೇಶ ಕಾಂಗ್ರೆಸ್ ಇಂದಿಲ್ಲಿ ಆರೋಪಿಸಿದೆ.

ಈ ಸಂಬಂಧ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದ ನಿಯೋಗ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ರಾಜ್ಯ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಮತದಾರರಿಗೆ ಹಣ ನೀಡಲು ಬಿಜೆಪಿ ಸರ್ಕಾರ ವ್ಯಾಪಕವಾಗಿ ಭ್ರಷ್ಟಾಚಾರ ಎಸಗುತ್ತಿದೆ. ಅಕ್ರಮದಲ್ಲಿ ಭಾಗಿಯಾಗಿರುವ ಬಿಜೆಪಿ ನಾಯಕರನ್ನು ಬಂಧಿಸಬೇಕು ಎಂದು ಒತ್ತಾಯಿಸಿದೆ. ಭ್ರಷ್ಟಾಚಾರ ಹಾಗೂ ಅಕ್ರಮದಲ್ಲಿ ತೊಡಗಿಕೊಂಡಿರುವ ಬಿಜೆಪಿ ನಾಯಕರನ್ನು ಬಂಧಿಸಬೇಕೆಂದು ಒತ್ತಾಯಿಸಿದರಲ್ಲದೇ, ಕೆಲ ಆಡಿಯೋ ಹಾಗೂ ವಿಡಿಯೋಗಳನ್ನು ಪೊಲೀಸರಿಗೆ ಕೊಟ್ಟಿದ್ದಾರೆ.



ದೂರು ನೀಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿ.ಕೆ ಶಿವಕುಮಾರ್ ಹಾಗೂ ಸಿದ್ದರಾಮಯ್ಯ, ಇತ್ತೀಚೆಗೆ ಮೂರ್ನಾಲ್ಕು ಶಾಸಕರ ಹೇಳಿಕೆ ಗಮನಿಸಿದ್ದೇನೆ. ನಾವು ಸೋಲುತ್ತೇವೆ ಎಂದು ಮತದಾರರಿಗೆ ಆಮಿಷ ತೋರುತ್ತಿದ್ದಾರೆ. ಇದಕ್ಕಾಗಿ ಸಾವಿರಾರು ಕೋಟಿ ಸಂಗ್ರಹಿಸಿಕೊಂಡಿದ್ದಾರೆ ಎಂದು ಆರೋಪಿಸಿದರು. ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ರಮೇಶ್ ಜಾರಕಿಹೊಳಿ ವಿರುದ್ಧ ದೂರು ಕೊಟ್ಟಿದ್ದೇವೆ. ಇವರೆಲ್ಲರ ಮೇಲೆ ಎಫ್‌ಐಆರ್ ಆಗಬೇಕು ಎಂದು ಒತ್ತಾಯಿಸಿದರು.

## ಕೆಎಸ್‌ಎಸ್ ಶಾಲೆಯಲ್ಲಿ 'ಪ್ರವೇಗ' ವಿಜ್ಞಾನ - ಕಲಾ ಪ್ರದರ್ಶನ

ದಾವಣಗೆರೆ,ಜ.25- ನಗರದ ಕೆಎಸ್‌ಎಸ್ ಇಂಗ್ಲಿಷ್ ಮೀಡಿಯಂ ಹೈಸ್ಕೂಲ್‌ನಲ್ಲಿ 'ಪ್ರವೇಗ' ವಿಜ್ಞಾನ ಮತ್ತು ಕಲಾ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು. ಜಾನಪದ ಶೈಲಿಯ ಹಳೆಯ ಕಾಲದ ಸೊಬಗನ್ನು ಬಿಂಬಿಸುವ ವಿವಿಧ ಮಾದರಿಗಳನ್ನು ವಿದ್ಯಾರ್ಥಿಗಳು ತಯಾರಿಸಿ ಪ್ರದರ್ಶಿಸಿದರು.

ಹರಿಹರ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಹನುಮಂತಪ್ಪ ಪ್ರದರ್ಶನ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಂ.ದಾರುಕೇಶ್ ಆಗಮಿಸಿದ್ದರು. ಸಂಸ್ಥೆಯ ಸಂಸ್ಥಾಪಕ ಹೆಚ್.ಕೆ.ಬಸವರಾಜ್, ನಿರ್ದೇಶಕರಾದ ಹರ್ಷಿತಾ ವಿಕಾಸ್, ವ್ಯವಸ್ಥಾಪಕ ನಿರ್ದೇಶಕರಾದ ಬಿ. ವಿಕಾಸ್ ಮತ್ತು ಮಾಲತಿ ಬಿ.ಟಿ, ಮುಖ್ಯೋಪಾಧ್ಯಾಯರಾದ ದಾಕ್ಷಾಯಿಣಿ ಮತ್ತು ಗಾನವಿ, ಪ್ರಾಂಶುಪಾಲರಾದ ಹೇಮಲತಾ, ಆಡಳಿತ ಮೇಲ್ವಿಚಾರಕ ರುದ್ರಮುನಿಯಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಹರಿಹರದಲ್ಲಿ ಕ್ಷಯ ರೋಗಿಗಳಿಗೆ ಪೌಷ್ಟಿಕ ಆಹಾರ ವಿತರಣೆ



ಹರಿಹರ, ಜ. 25 - 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಕ್ಷಯ ರೋಗ ಮುಕ್ತ ಭಾರತ ಕಾರ್ಯಕ್ರಮದ ಅಡಿಯಲ್ಲಿ ತಾಲ್ಲೂಕಿನ ಗುತ್ತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೊಂಡಜ್ಜಿ ವ್ಯಾಪ್ತಿಯ 40 ಕ್ಷಯ ರೋಗಿಗಳಿಗೆ ಉಚಿತವಾಗಿ ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಹನಗವಾಡಿ ಇವರು ಪೌಷ್ಟಿಕಾಂಶ ಉಳ್ಳ ಆಹಾರ ಪದಾರ್ಥಗಳನ್ನು ವಿವರಿಸಿದರು.

ಈ ಸಂದರ್ಭದಲ್ಲಿ ಡಾ. ಶಶಿಕಲಾ ವೈದ್ಯಾಧಿಕಾರಿಗಳು ಕೊಂಡಜ್ಜಿ ಪ್ರಾಥಮಿಕ ಆರೋಗ್ಯ ಕೇಂದ್ರ, ರಜನಿಕಾಂತ್ ನಗರಸಭಾ ಸದಸ್ಯರು, ಎಂ. ಉಮ್ಮಣ್ಣ, ಸುಧಾ ಸುಲಕೆ ಹಿರಿಯ ಪ್ರಾಥಮಿಕ ಆರೋಗ್ಯ ಸಂರಕ್ಷಣಾಧಿಕಾರಿಗಳು, ತಿಪ್ಪೇಸ್ವಾಮಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ದಾದಾಪೀರ್ ಆರೋಗ್ಯ ನಿರೀಕ್ಷಣಾಧಿಕಾರಿಗಳು, ನಂದೀಶ್ ಜಿಲ್ಲಾ ಕ್ಷಯ ರೋಗ ಮೇಲ್ವಿಚಾರಕರು, ಮಂಜುನಾಥ ತಾಲ್ಲೂಕು ಕ್ಷಯ ರೋಗ ಮೇಲ್ವಿಚಾರಕರು ಶರೀಫ್, ಪಿಹೆಚ್‌ಸಿಓ ಸೀಮಾ, ಜಯರಾಮ್, ಗಾಯತ್ರಿ, ಕಾವ್ಯ, ದೀಟೂರು ನಿರಂಜನ್ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯ ಶಿವಮೂರ್ತಿ ಮತ್ತು ಇತರರು ಉಪಸ್ಥಿತರಿದ್ದರು.

## ತಪೋವನದಲ್ಲಿ ಇಂದು ಗಣರಾಜ್ಯೋತ್ಸವ

ದೊಡ್ಡಬಾತಿಯ ತಪೋವನದಲ್ಲಿ ಶ್ರೀ ಶಕ್ತಿ ಅಸೋಸಿಯೇಷನ್ ತಪೋವನ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಮೆಡಿಕಲ್ ಕಾಲೇಜು, ಆಸ್ಪತ್ರೆ, ನರ್ಸಿಂಗ್ ಕಾಲೇಜು ಇವುಗಳ ಸಂಯುಕ್ತ ಆಶ್ರಯದಲ್ಲಿ ಇಂದು ಬೆಳಿಗ್ಗೆ 8 ಕ್ಕೆ ಗಣರಾಜ್ಯೋತ್ಸವ ದಿನಾಚರಣೆ ನಡೆಯಲಿದೆ.. ಡಾ. ಶಶಿಕುಮಾರ ವಿ. ಮೆಹರ್ವಾಡೆ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ರಾಮಚಂದ್ರ ಹೊರಣಿ ಬೈಲು, ಹರೀಶ್ ಆಗಮಿಸುವರು.

# 'ಕಲಿಕಾ ಹಬ್ಬ'ದಿಂದ ಮಕ್ಕಳ ಪ್ರತಿಭೆ, ಶೈಕ್ಷಣಿಕ ಚಟುವಟಿಕೆ ಸುಧಾರಣೆ

## ಎಲೆಬೇತೂರು : ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಅಂಬಣ್ಣ ಅಭಿಮತ

ದಾವಣಗೆರೆ, ಜ. 25 - ಎಲೆಬೇತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ ನಡೆಯಿತು.

ಬಾಳೆಕಂಬ, ತಳಿರು ತೋರಣಗಳಿಂದ ಸಜ್ಜುಗೊಳಿಸಿದ ವೇದಿಕೆಗೆ ಅತಿಥಿಗಳನ್ನು ಶಾಲಾ ಬ್ಯಾಂಡ್‌ನೊಂದಿಗೆ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಕರೆತರುವುದರ ಮೂಲಕ ಹಬ್ಬದ ವಾತಾವರಣ ಮೂಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಆರ್. ಹೆಚ್. ನಾಗರಾಜ್ ವಹಿಸಿದ್ದರು. ಉದ್ಘಾಟನೆಯನ್ನು ಕಲಿಕಾ ಹಬ್ಬದ ಸ್ವಾಗತ ಸಮಿತಿಯ ಹೆಚ್. ಬಸವರಾಜಪ್ಪ ದೀಪ ಬೆಳಗಿಸಿ ನೆರವೇರಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಅಂಬಣ್ಣ ಅವರು



ಮಾತನಾಡಿ, 'ಕಲಿಕಾ ಹಬ್ಬ' ಮಕ್ಕಳ ಪ್ರತಿಭೆ ಹಾಗೂ ಶೈಕ್ಷಣಿಕ ಚಟುವಟಿಕೆ ಸುಧಾರಣೆಗೆ ಮತ್ತೊಂದು ವೇದಿಕೆ. ಶಿಕ್ಷಕರು ಕ್ರಿಯಶೀಲರಾಗಿ ಭಾಗವಹಿಸಿ ಯಶಸ್ಸಿಗೆ ಶ್ರಮವಹಿಸಿದ್ದು, ಕಾರ್ಯಕ್ರಮದ ಸದುಪಯೋಗವನ್ನು ಮಕ್ಕಳು ಪಡೆಯಲಿ ಎಂದು ಶುಭ ಹಾರೈಸಿದರು. ಸಿ.ಆರ್.ಪಿ. ಈರಕರಿಯಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿ.ಪಂ. ಮಾಜಿ ಸದಸ್ಯೆ ರೇಣುಕಾ ಕರಿಬಸಪ್ಪ, ಜಿ.ಪಂ. ಮಾಜಿ ಸದಸ್ಯ ಬಿ. ಕರಿಬಸಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಬಿ. ಪ್ರಭು, ತಾ.ಪಂ. ಮಾಜಿ ಸದಸ್ಯ ಬಿ.ಜಿ. ಸಂಗನಗೌಡ್ರು, ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ. ವಿರುಪಾಕ್ಷಪ್ಪ, ಗ್ರಾ.ಪಂ. ಅಧ್ಯಕ್ಷೆ ಶಾಂತಮ್ಮ ಬಸನಗೌಡ್ರು, ಗ್ರಾ.ಪಂ. ಉಪಾಧ್ಯಕ್ಷೆ ಅಂಜಮ್ಮ ಹನುಮಂತಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಿ. ಪ್ರೇಮಾ, ಹೆಚ್. ಅಂಬಸಪ್ಪ, ಶಾಲಾ ಶಿಕ್ಷಣ ಪ್ರೇಮಿ ಎಂ.ಷಡಕ್ಷರಪ್ಪ ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆಯ ಎಸ್.ಕೆ. ಹಲಗಣ್ಣನವರ, ಬಿ.ಆರ್.ಪಿ. ಶೋಭಾ ಹಾಗೂ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವೇದಿಕೆಯಲ್ಲಿ ವಿಜ್ಞಾನ ಶಿಕ್ಷಕಿ ಅನ್ನಪೂರ್ಣ ಅತಿಥಿಗಳ ಒಂದು ಹಸ್ತದ ಗುರುತುಗಳನ್ನು ರಾಸಾಯನಿಕ ಚಟುವಟಿಕೆ ಮೂಲಕ ಪಡೆದುಕೊಂಡು ಮಕ್ಕಳಿಗೆ ವೈಜ್ಞಾನಿಕ ಚಿಂತನೆಯನ್ನು ಮೂಡಿಸಿದರು. ಈ ಸಂದರ್ಭದಲ್ಲಿ ಶಿಕ್ಷಕರಾದ ಜಿ.ಎಂ. ವಾಣಿ, ಜೆ.ಟಿ. ಕವಿತಾ, ಎ.ಆರ್. ಗೋಪಾಲಪ್ಪ, ಗಣೇಶಯ್ಯ ಸಹಕರಿಸಿದರು.

ನಿರೂಪಣೆಯನ್ನು ಶಿಕ್ಷಕಿಯರಾದ ಜಿ.ಎನ್. ಸುಮಿತ್ರ, ಎನ್. ಗಂಗಮ್ಮ, ವಿದ್ಯಾರ್ಥಿಗಳಿಂದ ಪ್ರಾರ್ಥನೆ, ಸ್ವಾಗತವನ್ನು ಮುಖ್ಯೋಪಾಧ್ಯಾಯರಾದ ಬಿ. ಸುಜಾತ, ವಂದನರ್ಪಣೆಯನ್ನು ಶಿಕ್ಷಕಿ ಟಿ.ಎಂ. ವಸಂತ ನೆರವೇರಿಸಿದರು.


**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 30x44, 40x40 (40 ಅಡಿ ಸಿಮೆಂಟ್ ರೋಡ್), ಪಶ್ಚಿಮ 40x30, 30x50, ಪೂರ್ವ-ಉತ್ತರ ಕಾರ್ನರ್ (60 ಅಡಿ ರಸ್ತೆಗೆ 4100 ಅಡಿ) ದಕ್ಷಿಣ 50x134 (110 ಅಡಿ ರೋಡ್)
ಐಗೂರು ವಿಜಯಕುಮಾರ್
99457 02495

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟ್ ಮಾರಾಟಕ್ಕಿದೆ**
ಚಿಕ್ಕನಹಳ್ಳಿ ಹೊಸ ಬಡಾವಣೆ ಖಾದಿ ಭಂಡಾರದ ಹತ್ತಿರ 30x70 ಅಳತೆಯ ಉತ್ತರಕ್ಕೆ ಮುಖವಾಗಿರುವ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
80951 55777, 63601 51212

**ಬಟ್ಟೆ ಇರುವ ಬ್ಯಾಗ್ ಕಳೆದಿದೆ**
ನಾಗೇಶ್ ಜ್ಯೂಯಲರಿ ಎಂದು ಹೆಸರಿರುವ ಬ್ಯಾಗ್ ಬಾಲಾಜಿ ಪ್ರಾವಿಜನ್ ಸ್ಟೋರ್ (ಬಿ.ಎಸ್. ಚನ್ನಬಸಪ್ಪ ಅಂಗಡಿ ಹತ್ತಿರ ಮಂಡಿಪೇಟೆಯಲ್ಲಿ) ಕಳೆದಿದೆ. ಇದರಲ್ಲಿ ಮದುವೆಗೆ ತೆಗೆದುಕೊಂಡ ಬಟ್ಟೆಗಳಿದ್ದು ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ನಂಬರಿಗೆ ತಿಳಿಸಿದಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು.
70225 89710

**ಕಾರುಗಳು ಮಾರಾಟಕ್ಕಿವೆ**
ಮಹೇಂದ್ರ TUV 300 2017
Toyota Innova 2015 V
Hyundai Creta 2016
Maruti Baleno Automatic 2018
Daivik Iyanhalli
99456 43223

**ABACUS**
New batch Starting from 1st Feb 2023 from Usha's skills Ville centers
1) Vidyanagar and
2) Shivakumara swamy Badavane
Usha kiran Contact
91418 33555

**ಬೇಕಾಗಿದ್ದಾರೆ**
ಚನ್ನಗಿರಿ ಹಾಗೂ ಚನ್ನಗಿರಿ ತಾಲೂಕಿನ ಸುತ್ತ-ಮುತ್ತ ಊರುಗಳಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. 8 ತಾಸು ಕೆಲಸ. ESI ಮತ್ತು EPF ಹಾಗೂ ಇತರೆ ಸರ್ಕಾರಿ ಸೌಲಭ್ಯಗಳೊಂದಿಗೆ 10,000 ದಿಂದ 15,000 ರೂ.ಗಳವರೆಗೆ ವೇತನ ಇರುತ್ತದೆ. ಸಂಪರ್ಕಿಸಿ.
98440 53261, 99867 21420

**ಹೋಟೆಲ್ ಸಾಮಾನುಗಳು ಮಾರಾಟಕ್ಕಿವೆ.**
Hotel Items For Sale
Mob No :- 9060381807

**ಜಮೀನು ಕಾಲುಗುತ್ತಿಗೆ ಹಣ ಗುತ್ತಿಗೆ ಕೊಡುವುದಿದೆ**
ಪುಟಗನಾಳದಿಂದ ಕಾಡಜ್ಜಿ ರೋಡಿನಲ್ಲಿ 6 ಎಕರೆ, ಬೋರ್ ನೀರು ಇದೆ. ವಿಚಾರಿಸಿರಿ
ಷಣ್ಮುಖಪ್ಪ
98800 68009

**ಸೈಟುಗಳು ಮಾರಾಟಕ್ಕಿವೆ**
ಹಳೇ ಬನಶಂಕರಿ ಉತ್ತರ 30x50, ಪಶ್ಚಿಮ 30x65 (ಅಕ್ಕ-ಪಕ್ಕ), ಪಶ್ಚಿಮ-ದಕ್ಷಿಣ ಕಾರ್ನರ್ 40x60, ಪೂರ್ವ 40x60, ಬಾಲಾಜಿ ಸರ್ಕಲ್ (ಡಬಲ್ ರೋಡ್ ಹತ್ತಿರ) ದಕ್ಷಿಣ 40x60.
ಐಗೂರು ವಿಜಯಕುಮಾರ್
99457 02495

**ಸೈಟುಗಳು ಮಾರಾಟಕ್ಕಿವೆ**
40x60 ಪೂರ್ವ 30x50 ಪಶ್ಚಿಮ (ಶಿವ ಪಾರ್ವತಿ ಲೇಔಟ್) 40x60 ಉತ್ತರ, 44x38 ಪೂರ್ವ-ಉತ್ತರ ಕಾರ್ನರ್, (ವಿನಾಯಕ ಬಡಾವಣೆ) 30x50 ಉತ್ತರ (ವಿವೇಕಾನಂದ ಬಡಾವಣೆ) 30x50 ಪೂರ್ವ (ಬನಶಂಕರಿ ಬಡಾವಣೆ)
95385 65909

**ಹೋಟೆಲ್ ನಲ್ಲಿ ತಿಂಡಿ (ಪಾರ್ಸೆಲ್) ಕಟ್ಟಲು ಅನುಭವವುಳ್ಳ ಕೆಲಸಗಾರರು ಬೇಕಾಗಿದ್ದಾರೆ.**
4 ಗಂಟೆಯ ಮೇಲೆ ಸಂಪರ್ಕಿಸಿ
Contact : 7019469302

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 35x60 ಉತ್ತರ-ಪೂರ್ವ ಕಾರ್ನರ್, ಯುರೋ ಸ್ಕೂಲ್ ಹತ್ತಿರ 30x62 ಪೂರ್ವ. ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 30x50 ಉತ್ತರ, 30x50 ಪಶ್ಚಿಮ, 40x60 ಪಶ್ಚಿಮ ಸಿದವೀರಪ್ಪ ಬಡಾವಣೆಯಲ್ಲಿ 35x40 ದಕ್ಷಿಣ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮನೆ ಬಾಡಿಗೆಗೆ ಇದೆ**
20x40 ಅಳತೆಯ ಪಿ.ಜೆ. ಬಡಾವಣೆಯ ಮೊದಲನೇ ಮಹಡಿಯಲ್ಲಿರುವ 2BHK ಹೊಂದಿರುವ ಮನೆ ಬಾಡಿಗೆಗೆ ಇದೆ.
78927 53714, 90191 77101

**For Sale**
Ladies & gents Parlour
Near SS Hospital
Anjaneya Complex,
Ramanagar Road, Davangere.
Ph. : 81974 23855
M. Girish

**1 BHK ಮನೆ ಲೀಸ್/ಬಾಡಿಗೆಗೆ ಇದೆ**
#389/G-54, ಶ್ರೀ ಸಾಯಿಬಾಬಾ ದೇವಸ್ಥಾನ ಹಿಂಭಾಗ, ಜಯನಗರ, "ಎ" ಬ್ಲಾಕ್, ದಾವಣಗೆರೆ.
98447 10844, 88843 62134

**ರಕ್ತ ದಾನ ಶ್ರೇಷ್ಠ ದಾನ**

**ಬೆಳ್ಳಿ ಫೋಟೋಗಳು ದೊರೆಯುತ್ತವೆ**
ಮದುವೆ, ಗೃಹಪ್ರವೇಶ ಇತ್ಯಾದಿ ಸಮಾರಂಭಗಳಿಗೆ ಬೆಳ್ಳಿ ದೇವರ ಮೂರ್ತಿಗಳ ಫೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮಿ, ಸರಸ್ವತಿ, ಕನ್ನಿಕಾಪರಮೇಶ್ವರಿ, ಸತ್ಯನಾರಾಯಣ ಸ್ವಾಮಿ, ಧರ್ಮಸ್ಥಳ ಮಂಜುನಾಥ ಸ್ವಾಮಿ, ಶಿವ ಪಾರ್ವತಿ, ಮಂತ್ರಾಲಯ ರಾಘವೇಂದ್ರ ಸ್ವಾಮಿ, ಆಂಜನೇಯ ಸ್ವಾಮಿ, ಶಿರಡಿ ಸಾಯಿಬಾಬಾ, ಈಶ್ವರ ಲಿಂಗ, ಮೈಲಾರ ಲಿಂಗೇಶ್ವರ, ವೀರಭದ್ರ ಸ್ವಾಮಿ, ಚಾಮುಂಡೇಶ್ವರಿ, ರೇಣುಕಾ ಯಲ್ಲಮ್ಮ, ಗುರು ಕೊಟ್ಟೂರೇಶ್ವರ ಸ್ವಾಮಿ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಮರುಳಸಿದ್ದೇಶ್ವರ ಸ್ವಾಮಿ ಸಣ್ಣ ಪ್ಯೂರ್ ಬೆಳ್ಳಿ ಫೋಟೋಗಳು ರೂ. 160 ರಿಂದ 260 ರೂ.ಗಳಿಗೆ ಸಿಗುತ್ತವೆ. ಅಂಗಡಿ ಪ್ರಾರಂಭಿಸಲು ಪೂಜೆ ಮಾಡುವ ವೈಟ್ ಮೆಟಲ್‌ನ ಸರ್ವಾಲಂಕಾರದ (ಲೈಟಿಂಗ್) ಫೋಟೋಗಳು ದೊರೆಯುತ್ತವೆ. ಮದುವೆ ಇತ್ಯಾದಿ ಸಮಾರಂಭಗಳಿಗೆ 1 ಗ್ರಾಂ. ಗೋಲ್ಡ್‌ನಲ್ಲಿ ಡಾಬು, ವಂಕಿ, ಹಾರಗಳು ಸಿಗುತ್ತವೆ ಮತ್ತು ಅನುಕೂಲಕರವಾದ ಗಿಫ್ಟ್‌ಗಳಿವೆ.
ಸ್ಥಳ : ಲಕ್ಷ್ಮೀ ಬಾಲಾಜಿ ಸಿಲ್ವರ್ ಫೋಟೋ ಫ್ರೇಮ್ಸ್
ಮಳಿಗೆ ನಂ. 34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.
ಮೊ. : 99451 59582

**ಬೇಕಾಗಿದ್ದಾರೆ**
ಪ್ಯಾಂಕಿಂಗ್ ಮಾಡಲು ಮತ್ತು ಹೆಲ್ಪರ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ಸಜ್ಜನ್ ಸೂಪರ್ ಮಾರ್ಟ್,
ಹೆಚ್.ಕೆ.ಆರ್. ಸರ್ಕಲ್, ನಿಟುವಳ್ಳಿ, ದಾವಣಗೆರೆ.
99009 71888

**House for rent**
1 BHK & 2 BHK
ಜೆ.ಹೆಚ್. ಪಟೇಲ್ ಬಡಾವಣೆ
E Block, 3rd Main, 2nd Cross.
ನೂತನವಾಗಿ ನಿರ್ಮಿಸಿರುವ ಮನೆ ಬಾಡಿಗೆ ಇದೆ.
94484 43198

**ವಾಹನ ಮಾರುವುದಿದೆಯೇ**
ನಿಮ್ಮ ಬೈಕ್ಸ್, ಯಾವುದೇ ವಾಹನ ಮಾರಾಟ ಮಾಡಬೇಕೇ ಯಾಕೇ ಚಿಂತೆ 2 ದಿನಗಳಲ್ಲಿ ಉತ್ತಮ ಬೆಲೆಗೆ ಮಾರಾಟ ಮಾಡಿಸಲಾಗುತ್ತದೆ.
ಸಂಪರ್ಕಿಸಿ : 99807 07763

**ಮನೆ ಮಾರಾಟಕ್ಕೆ ಇದೆ**
ಜೆ ಹೆಚ್ ಪಟೇಲ್ ಬಡಾವಣೆಯಲ್ಲಿ 20x30 ಅಳತೆಯಲ್ಲಿರುವ 2 BHK ಪಶ್ಚಿಮ ಸೈಟು ಪಶ್ಚಿಮ ಬಾಗಿಲಿರುವ, ಬೋರ್ ನೀರು ಮತ್ತು ನಲ್ಲಿ ನೀರು ಸೌಕರ್ಯವುಳ್ಳ ಮನೆ ಮಾರಾಟಕ್ಕೆ ಇದೆ.
ಫೋ ನಂ : 83173 63203

**ಸೈಟುಗಳು ಮತ್ತು ಮನೆಗಳು ಮಾರಾಟಕ್ಕಿವೆ**
ಎಂ.ಸಿ.ಸಿ ಬಿ ಬ್ಲಾಕ್ 30x40 ದಕ್ಷಿಣ ಸಿದ್ದವೀರಪ್ಪ 33x50 ಪೂರ್ವ, ಸಪ್ತಗಿರಿ ಶಾಲೆ 30x50 ಪಶ್ಚಿಮ ವಿನಾಯಕ 30x50 ದಕ್ಷಿಣ ಏಜೆಂಟರು KHB ಬಡಾವಣೆ 30x40 ದಕ್ಷಿಣ.
97418 11694

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ - 11,000
99161 43003

**ಬಾಡಿಗೆಗೆ ಇದೆ**
24x30 ಅಳತೆಯ ಗೋಡೌನ್ ಬಾಡಿಗೆಗೆ ಇದೆ. ವಿಚಾರಿಸಿ
ಡಿಸಿಎಂ ಲೇಔಟ್, ದಾವಣಗೆರೆ.
98444 92134

**ಬೇಕಾಗಿದ್ದಾರೆ**
ಸೇಲ್ಸ್ ಎಕ್ಸಿಕ್ಯೂಟಿವ್ (ಬಾಯ್ಸ್, ಗರ್ಲ್ಸ್) ಮತ್ತು Tally ಅನುಭವವುಳ್ಳವರು ಬೇಕಾಗಿದ್ದಾರೆ.
ಸಂಪರ್ಕಿಸಿರಿ :
ನಯನ ಮೋಟಾರ್ಸ್, ದಾವಣಗೆರೆ.
ಫೋ. : 97312 90327

**R .O. + Uv. Water Purifier 5499/-**
Just ( whole sale price )
Sales + Service + Exchange
ಮರುತ್ ಎಂಟರ್ ಪ್ರೈಸಸ್
ವೈ.ಎಂ. ಸಿ ಕಾಂಪ್ಲೆಕ್ಸ್ ಹದಡಿ ರಸ್ತೆ ಸ್ಟೇಡಿಯಂ ಎದುರು ದಾವಣಗೆರೆ
ಫೋ : 98458 67574

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಮಾರಾಟಕ್ಕಿದೆ**
ಎಲ್ಲಾ ವಸ್ತುಗಳು ಇರುವ ಬೇಕರಿ (ಫುಲ್ ಫರ್ನಿಷ್ಡ್ ಬೇಕರಿ ಮಾರಾಟಕ್ಕಿದೆ) ಎಂಸಿಸಿ ಬಿ ಬ್ಲಾಕ್, ವೆಂಕಟೇಶ್ವರ ದೇವಸ್ಥಾನದ ಹತ್ತಿರ, ದಾವಣಗೆರೆ.
99452 98381, 98808 08159

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**ಬರವಣಿಗೆ ಕೆಲಸ**
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ತಿಂಗಳಿಗೆ ಗಳಿಸಿ 16,000 ರಿಂದ 20,000 (ಕೊರಿಯರ್ ಸೌಲಭ್ಯವಿದೆ)
91487 33213

**ಬೇಕಾಗಿದ್ದಾರೆ**
Gangadhara Group of Company
ಮೆಡಿಕಲ್ ಶಾಪ್‌ನಲ್ಲಿ Experience ಆಗಿರುವವರು ಬೇಕಾಗಿದ್ದಾರೆ.
ಸಂಬಳ : 12000/-
89046 91084

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**WANTED**
Banking Sector tele caller (Female Only)
Qualification : Any Degree.
No. 2257/5 2nd Floor, MCC `A' Block
Beside Togataveera Kalyana Mantapa
81237 63199
Interview time : 11AM

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮನೆಗಳು ಲೀಸ್ ಗೆ ಹಾಗೂ ಬಾಡಿಗೆಗೆ**
ಹದಡಿ ರೋಡ್, ಶ್ರೀನಿವಾಸ ನಗರ 4ನೇ ಕ್ರಾಸ್, ತರಳಬಾಳು ಶಾಲೆ ಹತ್ತಿರ, ದಾವಣಗೆರೆ ಇಲ್ಲಿ ಡಬಲ್ ಬೆಡ್ ರೂಂ 2ನೇ ಮಹಡಿ ಸುಸಜಿತ ಮನೆ ಲೀಸ್ ಗೆ ಹಾಗೂ ಮೂರು ಬೆಡ್ ರೂಂ 1ನೇ ಮಹಡಿ ಸುಸಜ್ಜಿತ ಮನೆ ಬಾಡಿಗೆಗೆ ಇದೆ ಸಂಪರ್ಕಿಸಿ.
ಮೊ : 99723 42941

**ಪ್ರವೇಶ ಪ್ರಕಟಣೆ**
SSLC, PUC -(Arts/Com/Sci)
NURSERY TEACHER TRAINING (NTC)
BA , B.COM, BBA, MBA (ALL)
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
86602 35013

**ಅಣಿಗೆರೆ ಕಟ್ಟೆ ಜ್ಯೋತಿಷ್ಯ ಫಲಂ**
ಶ್ರೀ ಚೌಡೇಶ್ವರಿ ದೇವಿ ಮತ್ತು ಭೂತರಾಯನ ಪ್ರಯೋಗದಿಂದ ಪೂಜೆ ಸಲ್ಲಿಸಲಾಗುತ್ತದೆ.
ಪ॥ ಎ.ಕೆ.ರಾವ್
ವಿ.ಸೂ. ಸ್ತ್ರೀ-ಪುರುಷ ವಶೀಕರಣ ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ. ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ .
99644 84508

**ಉಚಿತ**
ಮನೆ ಪ್ಲಾನ್ & ಫ್ರಂಟ್ ಎಲಿವೇಷನ್
ಪ್ರತಿ ಚದುರಡಿಗೆ 1850 ರಿಂದ 1950/- ರೂನಂತೆ ಕಟ್ಟಡ ನಿರ್ಮಿಸಿ ಕೊಡಲಾಗುವುದು. ಅವರಿಗೆ ಮನೆ ಪ್ಲಾನ್ ಹಾಗೂ ಫ್ರಂಟ್ ಎಲಿವೇಷನ್ ಉಚಿತ (T&C apply)
ಮರುತ್ ಕನ್‌ಸ್ಟ್ರಕ್ಷನ್
YMC ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
ಫೋ. : 98868 96574

## ಗಣರಾಜ್ಯೋತ್ಸವ

### ಸಂವಿಧಾನ ಶಿಲ್ಪಿ- ಡಾ|| ಬಿ. ಆರ್. ಅಂಬೇಡ್ಕರ್

74ನೇಯ ಗಣರಾಜ್ಯೋತ್ಸವ,
ಭಾರತೀಯರಿಗೆ ಅತ್ಯಂತ ಮಹತ್ವದ ದಿನ,
2 ವರ್ಷ, 11 ತಿಂಗಳು, 18 ದಿನಗಳ ಸಂವಿಧಾನ ರಚನೆ,
ಜನವರಿ 26,1950- ಡಾ|| ರಾಜೇಂದ್ರ ಪ್ರಸಾದ್‌ರಿಂದ ಚಾಲನೆ.

ಸಂವಿಧಾನವನ್ನು ಜಾರಿಗೊಳಿಸಿ,
ದೇಶದ ರಾಜಪ್ರಭುತ್ವ- ತ್ಯಜಿಸಿ,
ಪ್ರಜಾಪ್ರಭುತ್ವದಲ್ಲಿ ನಿಜ ಅಸ್ತಿತ್ವ ರೂಪಿಸಿ,
'ಸಂವಿಧಾನ' ಅಂಗೀಕರಿಸಿ ಅನ್ವಯಿಸಿ ಕೊಂಡ ಸುದಿನ.

ಮೇಜರ್ ಧ್ಯಾನ್‌ಚಂದ್ ರಾಷ್ಟ್ರೀಯ ಕ್ರೀಡಾಂಗಣ,
ರಾಜ್‌ಪಥ್‌ನಲ್ಲಿ ರಾಷ್ಟ್ರಧ್ವಜ ಹಾರಿಸಿ ಸಂಭ್ರಮಿಸೋಣ..
ರಾಷ್ಟ್ರಧ್ವಜ, ಮಿಲಿಟರಿ ಉಪಕರಣಗಳ ಪ್ರದರ್ಶನ,
ಸಂವಿಧಾನ-ಸ್ವಾತಂತ್ರ್ಯಕ್ಕಾಗಿ ಹೋರಾಡಿದ
ಮಹನೀಯರನ್ನು ಗೌರವಿಸೋಣ.

ದೇಶದ ಇತಿಹಾಸದ ಪ್ರಾಮುಖ್ಯತೆ,
ಸೌಹಾರ್ದತೆ, ಶಾಂತಿ, ಸಹಿಷ್ಣುತೆ, ಸಮಾನತೆ..,
ಪೂರ್ಣ ಸ್ವರಾಜ್, ವಸಾಹತುಶಾಹಿ - ಸ್ವಾತಂತ್ರ್ಯದ ಘೋಷಣೆ,
ಸಾಧಕರಿಗೆ ಪದ್ಮಶ್ರೀ- ಪದ್ಮಭೂಷಣ ಪ್ರಶಸ್ತಿ ವಿತರಣೆ.

ಅತಿದೊಡ್ಡ ಪ್ರಜಾಪ್ರಭುತ್ವ ದೇಶ- ನಮ್ಮ ಭಾರತ,
ಸ್ವಾತಂತ್ರ್ಯ, ಸಹೋದರತ್ವ, ಏಕತೆಯ ಸಂಕೇತ,
ಸ್ವತಂತ್ರ ವಾದ ಜೀವನ- ಸಮಾನವಾದ ಶಿಕ್ಷಣ,
ರಾಷ್ಟ್ರ ಗೀತೆ ಯೊಂದಿಗೆ -ಗಣರಾಜ್ಯೋತ್ಸವ ವನ್ನು ಆಚರಿಸೋಣ.

**- ಡಾ|| ದೀಪಶ್ರೀ ಪ್ರಮೋದ್ ಗುಜ್ಜರ್,**
ಉಪನ್ಯಾಸಕರು, ಬಾಪೂಜಿ ದಂತ ವೈದ್ಯಕೀಯ
ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ದಾವಣಗೆರೆ.

# ಗಣರಾಜ್ಯೋತ್ಸವ ಪ್ರತಿಯೊಬ್ಬ ಭಾರತೀಯರ ಪಾಲಿಗೆ ಹೆಮ್ಮೆಯ ದಿನ



**ಗಣರಾಜ್ಯೋತ್ಸವ ದಿನವನ್ನು ಇಡೀ ದೇಶವೇ ಸಂಭ್ರಮಿಸುತ್ತದೆ. ಈ ದಿನವು ದೇಶ ಸ್ವಾತಂತ್ರ್ಯೋತ್ತರ ಗಣರಾಜ್ಯ ದೇಶವಾದ ಐತಿಹಾಸಿಕ ದಿನ ಮತ್ತು ಸಂವಿಧಾನ ಜಾರಿಗೆ ಬಂದ ದಿನವಾಗಿದೆ. 2023ನೇ ಇಸವಿಯಲ್ಲಿ ಇರುವ ಭಾರತೀಯರಾದ ನಾವೆಲ್ಲರೂ ಜನವರಿ 26, 2023ರಂದು 74ನೇ ಗಣಾರಾಜ್ಯೋತ್ಸವ ಆಚರಣೆಗೆ ಸಜ್ಜಾಗೋಣ.**

ಗಣರಾಜ್ಯ ದಿನವನ್ನು ದೇಶವ್ಯಾಪಿ ಹಾಗೂ ಪ್ರಮುಖವಾಗಿ ರಾಷ್ಟ್ರ ರಾಜಧಾನಿ ನವದೆಹಲಿಯ ರಾಜಪಥ್ ಮಾರ್ಗದಲ್ಲಿ ಮೂರೂ ರಕ್ಷಣಾ ಪಡೆಗಳ ಕವಾಯತ್ತು, ಆಧುನಿಕ ಮಿಲಿಟರಿ ಸಲಕರಣೆಗಳ, ವಿವಿಧ ರಾಜ್ಯಗಳ ಸ್ತಬ್ಧ ಚಿತ್ರಗಳ ಹಾಗೂ ಮಕ್ಕಳ ನೃತ್ಯಗಳ ಪ್ರದರ್ಶನ, ವೀರ ಮರಣವನ್ನಪ್ಪಿದ ಯೋಧರಿಗೆ ಪರಮವೀರ ಚಕ್ರಗಳನ್ನು ಪ್ರದಾನ ಮಾಡುವುದರೊಂದಿಗೆ ಅತ್ಯಂತ ಸಡಗರ, ಸಂಭ್ರಮದಿಂದ ಆಚರಿಸಲಾಗುವುದು. ಈ ದಿನವನ್ನು ವಿಶೇಷವಾಗಿ ಭಾರತದ ಸಂವಿಧಾನವನ್ನು ಜಾರಿಗೊಳಿಸಿದ ದಿನವನ್ನಾಗಿ ಆಚರಿಸಲಾಗುವುದು. ಇದು ಜಾರಿಗೆ ಬರುವ ಮುನ್ನ ದೇಶ ಹರಿದು ಹಂಚಿ ಹೋಗಿದ್ದರ ಜೊತೆಗೆ ವಿವಿಧ ಭಾಷೆಗಳನ್ನಾಡುವ ಜನರು ಹಲವು ಪ್ರಾಂತ್ಯಗಳಲ್ಲಿ ಚದುರಿ ಹೋಗಿದ್ದರು. ಇವರೆಲ್ಲರನ್ನು ಭಾಷೆಗಳಿಗೆ ಅನುಗುಣವಾಗಿ ಒಗ್ಗೂಡಿಸಿ ಭಾಷಾವಾರು ಪ್ರಾಂತ್ಯಗಳನ್ನು ರಚಿಸಿ ಅದನ್ನು ಗಣರಾಜ್ಯ ಎಂದು ಕರೆಯಲಾಯಿತು.

ಸ್ವಾತಂತ್ರ್ಯದ ನಂತರ ಭಾರತಕ್ಕೆ ತನ್ನದೇ ಆದ ಸಂವಿಧಾನದ ಅಗತ್ಯತೆ ಬಹುವಾಗಿತ್ತು. ಇದನ್ನು ಮನಗಂಡು ಸಂವಿಧಾನ ರಚನಾ ಸಭೆಯನ್ನು ರಚಿಸಿ ಅದರಲ್ಲಿ ದೇಶದ ವಿವಿಧ ಭಾಗಗಳಿಂದ ಆಯ್ಕೆಯಾದ 318 ಪ್ರತಿನಿಧಿಗಳನ್ನು ಸೇರ್ಪಡೆ ಮಾಡಲಾಯಿತು. ಇದರ ಮೊದಲ ಸಭೆ 1946 ಡಿಸೆಂಬರ್ 9 ರಂದು ಸಮಾವೇಶಗೊಂಡಿತು. ಸಂವಿಧಾನ ರಚನಾ ಸಭೆಯ ಅಧ್ಯಕ್ಷತೆಯನ್ನು ಡಾ. ಬಾಬು ರಾಜೇಂದ್ರ ಪ್ರಸಾದ್ ಹಾಗೂ ಕರಡು ರಚನಾ ಸಮಿತಿಯ ಅಧ್ಯಕ್ಷತೆಯನ್ನು ಡಾ. ಬಿ. ಆರ್. ಅಂಬೇಡ್ಕರ್ ರವರು ವಹಿಸಿಕೊಂಡರು. ಇವರಲ್ಲದೆ ನೆಹರು, ಸರ್ದಾರ್ ಪಟೇಲ್, ಮುಖರ್ಜಿ, ಮುನ್ಷಿ, ಸರೋಜಿನಿ ನಾಯ್ಡು, ವಿಜಯಲಕ್ಷ್ಮಿ ಪಂಡಿತ್, ಎಸ್. ನಿಜಲಿಂಗಪ್ಪ, ಕೆ. ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ ಇನ್ನು ಮುಂತಾದವರು ರಚನಾ ಸಭೆಯಲ್ಲಿದ್ದ ಪ್ರಮುಖರು. ಇವರೆಲ್ಲರ ಸತತ ಪರಿಶ್ರಮದ ಫಲವಾಗಿ ದೇಶಕ್ಕೊಂದು ಉತ್ತಮ ಸಂವಿಧಾನ ರಚನೆಯಾಯಿತು.1949 ರ ನವೆಂಬರ್ 26 ರಂದು ಅಂಗೀಕೃತವಾದ ಸಂವಿಧಾನ ಮೂಲತಃ 22 ಅಧ್ಯಾಯಗಳು, 395 ವಿಧಿಗಳು, 8 ಅನುಸೂಚಿಗಳನ್ನು ಒಳಗೊಂಡಿದೆ. ಇದು ವಿಶ್ವದಲ್ಲಿಯೇ ಅತ್ಯಂತ ವ್ಯಾಪಕ ಮತ್ತು ಸುದೀರ್ಘ ಲಿಖಿತ ಸಂವಿಧಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಂತಿಮವಾಗಿ ಇದು 1950 ಜನವರಿ 26 ರಂದು ಜಾರಿಗೆ ಬಂದಿತು. ಇಂತಹ ಮಹತ್ವದ ದಿನವನ್ನು ಪ್ರತಿ ವರ್ಷ ದೇಶಾದ್ಯಂತ ಗಣರಾಜ್ಯ ದಿನವಾಗಿ ಆಚರಿಸುವ ಪರಿಪಾಠ ಜಾರಿಗೆ ಬಂದಿದೆ. ಈ ದಿನದಂದು ಸಂವಿಧಾನ ಕರ್ತೃ ಡಾ. ಬಿ. ಆರ್. ಅಂಬೇಡ್ಕರ್ ರವರನ್ನು ಅತ್ಯಂತ ಗೌರವದಿಂದ ಸ್ಮರಿಸಲಾಗುವುದು.

ಸಂವಿಧಾನವು ಲಿಖಿತ ಸಂವಿಧಾನ, ವಯಸ್ಕ ಮತದಾನ ಪದ್ಧತಿ, ರಾಜ್ಯ ನೀತಿ ನಿರ್ದೇಶಾತ್ಮಕ ತತ್ವಗಳು, ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ, ಬಹುಪಕ್ಷ ಪದ್ಧತಿ, ಕಲ್ಯಾಣ ರಾಜ್ಯ ಸ್ಥಾಪನೆ, ಗಣತಂತ್ರ ವ್ಯವಸ್ಥೆ, ಸಂಸದೀಯ ಸರ್ಕಾರ ಪದ್ಧತಿ, ಏಕ ಪೌರತ್ವ, ತುರ್ತು ಪರಿಸ್ಥಿತಿಯ ಅಧಿಕಾರಗಳು, ಪಂಚವಾರ್ಷಿಕ ಯೋಜನಾ ವ್ಯವಸ್ಥೆ ಯಂತಹ ಲಕ್ಷಣಗಳನ್ನು ಒಳಗೊಂಡಿದ್ದು, ಆರು ಮೂಲಭೂತ ಹಕ್ಕುಗಳು ಹಾಗೂ ಹನ್ನೊಂದು ಮೂಲಭೂತ ಕರ್ತವ್ಯಗಳನ್ನು ಒಳಗೊಂಡಿದೆ.

"ಭಾರತದ ಪ್ರಜೆಗಳಾದ ನಾವು ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮ ನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ನಿರ್ಮಿಸುವ ಸಲುವಾಗಿ ಮತ್ತು ಇಲ್ಲಿನ ಸಮಸ್ತ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ನ್ಯಾಯವನ್ನು ವಿಚಾರ, ಅಭಿವ್ಯಕ್ತಿ, ನಂಬಿಕೆ, ವಿಶ್ವಾಸ ಹಾಗೂ ಅವರೆಲ್ಲರಲ್ಲಿನ ವ್ಯಕ್ತಿಗತ ಗೌರವ ಹಾಗೂ ರಾಷ್ಟ್ರದ ಏಕತೆ ಮತ್ತು ಸಮಗ್ರತೆಯ ಆಶ್ವಾಸನೆಯೊಂದಿಗೆ ಭ್ರಾತೃತ್ವವನ್ನು ವೃದ್ಧಿಗೊಳಿಸಲು ಈ ಸಂವಿಧಾನವನ್ನು ಅಂಗೀಕರಿಸಿ, ಶಾಸನಬದ್ಧಗೊಳಿಸಿ ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ," ಎಂಬ ವಾಕ್ಯಗಳನ್ನು ಸಂವಿಧಾನದ ಪೂರ್ವ ಪೀಠಿಕೆ ಒಳಗೊಂಡಿದ್ದು, ಇದು ಸಂವಿಧಾನದ ಮೂಲ ಆಶಯವೂ ಆಗಿದೆ. ಇದನ್ನರಿತು ಸರ್ಕಾರಗಳು ಕಾರ್ಯ ನಿರ್ವಹಿಸಬೇಕಾಗಿದೆ.

ಪ್ರಸ್ತುತದಲ್ಲಿ ಸಂವಿಧಾನದ ತತ್ವ, ಸಿದ್ಧಾಂತ ಮತ್ತು ಮೂಲ ಆಶಯಗಳನ್ನು ಆಳುವ ಸರ್ಕಾರ, ಜನಪ್ರತಿನಿಧಿ ಗಳು ಹಾಗೂ ಬಹುಪಾಲು ಪ್ರಜೆಗಳು ಮರೆತಂತೆ ಗೋಚರಿಸುತ್ತದೆ. ಇದರಿಂದ ದೇಶ ಯಾವುದೇ ರೀತಿಯಲ್ಲಿ ಮುಂದುವರೆಯಲಾರದು. ಆಯ್ಕೆಯಾದ ಜನಪ್ರತಿನಿಧಿ ಗಳು ದೇಶದ ಪ್ರಗತಿಗೋಸ್ಕರ ಕಾಯಾ, ವಾಚಾ, ಮನಸಾ ದುಡಿಯಬೇಕೇ ವಿನಃ ಯಾರೊಬ್ಬರೂ ಭ್ರಷ್ಟಾಚಾರದಂ ತಹ ಪಿಡುಗಿಗೆ ಒಳಗಾಗ ಬಾರದು. ಪ್ರಜೆಗಳು ತಮ್ಮ ಮೌಲ್ಯಯುತ ಮತವನ್ನು ರಾಜಕೀಯ ಪಕ್ಷಗಳು ಒಡ್ಡುವ ಆಸೆ, ಆಮಿಷಗಳಿಗೆ ಮಾರಿಕೊಳ್ಳಬಾರದು. ದೇಶದ ಭವಿಷ್ಯ ಪ್ರಜ್ಞಾವಂತ ಪ್ರಜೆಗಳ ಕೈಲಿ ಅಡಗಿದೆ ಎಂಬುದನ್ನು ಪ್ರತಿಯೊಬ್ಬರೂ ಅರಿತುಕೊಂಡಾಗ ಮಾತ್ರ ಸಂವಿಧಾನದ ಘನತೆ ಮತ್ತು ಪಾವಿತ್ರ್ಯತೆಯನ್ನು ಎತ್ತಿ ಹಿಡಿಯಬಹುದು. ಇಂದು ವಿಶ್ವದಲ್ಲಿ ಭಾರತ 5ನೇ ಆರ್ಥಿಕ ಶಕ್ತಿಯಾಗಿ ಹೊರ ಹೊಮ್ಮಿರುವುದು ಸಂತಸದ ಸಂಗತಿ.ಆದ್ದರಿಂದ ಆಳುವ ಸರ್ಕಾರ, ಜನಪ್ರತಿನಿಧಿಗಳು ಹಾಗೂ ಪ್ರತಿಯೊಬ್ಬ ಪ್ರಜೆ ದೇಶದ ಹಿತ ಮತ್ತು ಪ್ರಗತಿಯ ಕಡೆ ಈ ದಿನದಂದು ಆಲೋಚಿಸಿ ಅದರಂತೆ ನಡೆದುಕೊಂಡಲ್ಲಿ ಗಣರಾಜ್ಯದ ಆಚ ರಣೆಗೆ ಒಂದರ್ಥ ಬರುವುದರಲ್ಲಿ ಯಾವುದೇ ಸಂಶಯವಿಲ್ಲ.

**- ಡಾ. ಶಿವಯ್ಯ ಎಸ್**
ದಾವಣಗೆರೆ.
s.shivaiah26@gmail. com

## ಗಣರಾಜ್ಯ ದಿನ

ಭಾರತೀಯರು ನಾವು
ನಮ್ಮದೇ ಸಂವಿಧಾನ ಹೊಂದಿದವರು
ವಿವಿಧ ಧರ್ಮ; ವಿವಿಧ ಮತ
ಎಲ್ಲವನ್ನೂ ಸಂಕಲಿಸಿದ
ಎಲ್ಲವನ್ನೂ ಸಮೀಕರಿಸಿದ
ಭವ್ಯ ಭಾರತ ಸಂವಿಧಾನ ನಮ್ಮದು!

ಸರ್ವ ಜನಾಂಗದ ಶಾಂತಿಯ ತೋಟ
ಸರ್ವ ಸಮಾನತೆಯ ಕಾಂತಿಯ ನೋಟ
ಮನುಷ್ಯ ಪ್ರೀತಿಯ ಒಲವಿನ ಆಟ
ನಮಗೆ ನಮ್ಮದೇ ಸಂವಿಧಾನದ ಪಾಠ
ಬಹುತ್ವ ಭಾರತ ಬಲಿಷ್ಠ ನೋಟ!

ಗಣರಾಜ್ಯಗಳು ಒಕ್ಕೂಟವಾದ
ಸವಿ ನೆನಪಿನ ಸುದಿನ ಜನವರಿ 26
ಭಾರತೀಯರಾಗಿ ಜನಿಸಿದ ಪುಣ್ಯದ ದಿನ
ನಾವಿಂದು ಆಚರಿಸುವ ಗಣರಾಜ್ಯೋತ್ಸವದ
ಆಶಯ ಶುಭಾಶಯ ಎಲ್ಲರಿಗೂ
ಗಣರಾಜ್ಯೋತ್ಸವದ ಶುಭಾಶಯ !

**- ಜೆಂಬಿಗಿ ಮೃತ್ಯುಂಜಯ**
ಕನ್ನಡ ಉಪನ್ಯಾಸಕರು, ದಾವಣಗೆರೆ

## ಗಣರಾಜ್ಯೋತ್ಸವ

ಬಂದಿದೆ ಜನವರಿ ಇಪ್ಪತ್ತಾರು
ಎಳೆಯೋಣ ಗಣರಾಜ್ಯೋತ್ಸವದ ತೇರು
ಸಂವಿಧಾನ ಜಾರಿಗೆ ಬಂದ ದಿನ
ಭಾರತದ ಇತಿಹಾಸದ ಚಾರಿತ್ರಿಕ ಕ್ಷಣ

ವಿವಿಧತೆಯಲ್ಲಿ ಏಕತೆ ಸಾರುವ ದಿನ
ಎಷ್ಟೇ ಜಾತಿ, ಮತ ,ಪಂಥಗಳಿದ್ದರು
ಎಲ್ಲರೂ ಸಮಾನರು ಎನ್ನುವ ಸಂವಿಧಾನ
ಕೇಸರಿ ಬಿಳಿ ಹಸಿರಿನಿಂದ ಕಂಗೊಳಿಸುವ ಧ್ವಜಾರೋಹಣ
ಜಗಕೆ ಸಾರುವುದು ನಮ್ಮಯ ಸಾರ್ವಭೌಮತ್ವವನ್ನ

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ
ವಂದೇ ಮಾತರಂ ಜಯ ಘೋಷ
ತಾಯಿ ಭಾರತಾಂಬೆಗೆ ಅದುವೇ ಹರುಷ
ದೇಶಕ್ಕಾಗಿ ಶೌರ್ಯ ಮೆರೆದವರ ಸ್ಮರಣೆ ದಿನ
ಮೀಸಲಿಡೋಣ ದೇಶಕ್ಕಾಗಿ ನಮ್ಮ ತನುಮನ

ಸ್ತಬ್ಧಚಿತ್ರ, ಪರೇಡ್‌ಗಳ ನೋಟ ಆಕರ್ಷಣ
ಯುದ್ಧ ವಿಮಾನ ಕ್ಷಿಪಣಿಗಳ ಶಕ್ತಿ ಪ್ರದರ್ಶನ
ನಾಡು ನುಡಿಯ ವೈಭವದ ಅನಾವರಣ
ನಾವು ಭಾರತೀಯರೆಂಬುದೇ ನಮ್ಮ ಗುಣ

ಗಂಗೆ,ತುಂಗೆ,ಕಾವೇರಿ ಹರಿವ ನಾಡು
ಎಲ್ಲರೂ ಒಂದೇ ಎನ್ನುವ ಶಾಂತಿಯ ಬೀಡು
ಸರ್ವಧರ್ಮ ಸಮನ್ವಯದ ಐಕ್ಯತೆಯ ಗೂಡು
ತಾಯಿ ಭಾರತಾಂಬೆಯೆ ಮತ್ತೊಮ್ಮೆ ಇಲ್ಲಿಯೇ ಜನ್ಮ ನೀಡು.

**- ಬಸವರಾಜ. ಕರುವಿನ ಬಸವನಾಳು**

## ಗಣತಂತ್ರ ದಿನದ ಶುಭಾಶಯಗಳು

ಗಣತಂತ್ರ ದಿನದ ಶುಭಾಶಯಗಳು
ಮನದಿಂದ ಭಾರತಾಂಬೆಗೆ ನಮನಗಳು
ಅನುಕ್ಷಣವು ಇರಲಿ ದೇಶಭಕ್ತಿ ಭಾವವು
ಕಣಕಣದಲು ತುಂಬಿರಲೀ ಭಾರತೀಯತೆಯು

ತನ್ನ ಕಾಲಮೇಲೆ ದೇಶ ನಿಂತ ದಿನವಿದು
ಅನನ್ಯ ದೇಶಭಕ್ತರ ಕೊಡುಗೆಯ ದಿನವಿದು
ಮನದಿಂದ ಆ ಯೋಗಿಗಳಿಗೆ ಕೃತಜ್ಞತೆಗಳು
ನೆನೆಯುವೆವು ನಿಮ್ಮನ್ನು ಅನುಕ್ಷಣದಲು

ಇನ್ನು ಇನ್ನೂ ಬೆಳೆಯಲಿ ಈ ನಮ್ಮ ದೇಶವು
ತನ್ನ ಅಧ್ಯಾತ್ಮಿಕ ಶಕ್ತಿಯು ಪ್ರಜ್ವಲಿಸಲಿ
ಮಣ್ಣಿನ ಮಕ್ಕಳ ಏಳಿಗೆಗೆ ಬೆರಗಾಗಲಿ ವಿಶ್ವವು
ಕಣ್ಣಾಗಿ ಶಾಂತಿ ನೆಮ್ಮದಿಯ ಹರಡುತ್ತಿರಲಿ

ಹೆಮ್ಮೆಯಿಂದ ರಾಷ್ಟ್ರ ಧ್ವಜಕೆ ನಮಸ್ಕರಿಸುವ
ಒಮ್ಮನದಿ ರಾಷ್ಟ್ರ ಗೀತೆ ಹಾಡಿ ಬಾಗುವ
ಸುಮ್ಮನಿರದೆ ದೇಶಭಕ್ತರ ತ್ಯಾಗ ನೆನೆಯುವ
ನಮ್ಮೊಳಗೆ ದೇಶಭಕ್ತಿಯ ಕಿಚ್ಚೆಬ್ಬಿಸುವ

ಸಿರಿಹರಿಯ ಕೃಪೆಯು ಸದಾ ನಮ್ಮದೇಶಕಾಗಲಿ
ಪರಿಪೂರ್ಣ ಸಂಸ್ಕೃತಿಯು ವಿಶ್ವಮಾನ್ಯ ವಾಗಲಿ
ಅರಿವಿನ ಆನಂದ ಜ್ಯೋತಿ ಸದಾ ಬೆಳಗುತಿರಲಿ
ಪರಮ ಸಾಧನೆ ಮಾರ್ಗದಲ್ಲಿ ಮುನ್ನಡೆಯಲಿ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**


## ಜಾಮಿಯಾ ವಿ.ವಿ.ಯಲ್ಲಿ ಬಿಬಿಸಿ ಸಾಕ್ಷ್ಯಚಿತ್ರದ ಸಂಘರ್ಷ

ನವದೆಹಲಿ, ಜ. 25 – ಬಿ.ಬಿ.ಸಿ. ಸಾಕ್ಷ್ಯಚಿತ್ರ ಪ್ರದರ್ಶನ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾನಿಲಯದಲ್ಲಿ ಸಂಘರ್ಷಕ್ಕೆ ಕಾರಣವಾಗಿದೆ. ಸಾಕ್ಷ್ಯಚಿತ್ರ ಪ್ರದರ್ಶಿಸುವುದಾಗಿ ಎಡಪಂಥೀಯ ವಿದ್ಯಾರ್ಥಿ ಸಂಘಟನೆಗಳು ತಿಳಿಸಿದ್ದವು. ಆದರೆ, ವಿಶ್ವವಿದ್ಯಾನಿಲಯ ಮತ್ತು ನಗರ ಪೊಲೀಸರು ಅದಕ್ಕೆ ಅವಕಾಶ ನೀಡಲಿಲ್ಲ. ಇಡೀ ದಿನ ಕ್ಯಾಂಪಸ್ ಹೊರಗೆ ಪೊಲೀಸರನ್ನು ನಿಯೋಜಿಸಲಾಗಿತ್ತು. ಪ್ರತಿಭಟನಾನಿರತ ಹಲವರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಈ ರೀತಿಯ ಕಾರ್ಯಕ್ರಮಗಳ ಮೂಲಕ ವಿಶ್ವವಿದ್ಯಾಲಯದ ವಾತಾವರಣಕ್ಕೆ ಧಕ್ಕೆ ತರಲು ಕೆಲವರು ಪ್ರಯತ್ನ ನಡೆಸುತ್ತಿದ್ದಾರೆ ಎಂದು ವಿ.ವಿ. ಕುಲಪತಿ ನಜ್ಮಾ ಅಖ್ತರ್ ಹೇಳಿದ್ದಾರೆ. ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದಲ್ಲೂ ಸಹ ಸಾಕ್ಷ್ಯಚಿತ್ರಕ್ಕೆ ಸಂಬಂಧಿಸಿದಂತೆ ಇದೇ ರೀತಿಯ ಘರ್ಷಣೆ ಹಾಗೂ ಪ್ರತಿಭಟನೆಗಳು ನಡೆದಿದ್ದವು.

## ವಿದ್ಯಾನಿಕೇತನ ಶಾಲೆಯಲ್ಲಿ ಇಂದು ಗಣರಾಜ್ಯೋತ್ಸವ

ವಿದ್ಯಾನಿಕೇತನ ಆಂಗ್ಲ ಮಾಧ್ಯಮ ಪಬ್ಲಿಕ್ ಸ್ಕೂಲ್ ಆಶ್ರಯದಲ್ಲಿ 74ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 8.30 ಕ್ಕೆ ಶಾಲಾವರಣದಲ್ಲಿ ಆಚರಿಸಲಾಗುವುದು. ಧ್ವಜಾರೋಹಣವನ್ನು ನ್ಯಾಯವಾದಿ ಎಲ್. ಹೆಚ್.ಅರುಣ ಕುಮಾರ್ ನೆರವೇರಿಸುವರು. ವಿದ್ಯಾಸಂಸ್ಥೆಯ ಸಂಸ್ಥಾಪಕ ರುದ್ರ ಮುನಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಆರ್. ಮೀನಾಕ್ಷಿ, ಮಂಜುನಾಥ ಹೆಗಡೆ, ಆನಂದ್ ಕೆ.ಬಿ. ಭಾಗವಹಿಸುವರು.

## ನಗರದಲ್ಲಿ ಇಂದು ಬೀರಲಿಂಗೇಶ್ವರ ಸ್ವಾಮಿ ದೇವಸ್ಥಾನದ ಉದ್ಘಾಟನೆ



ಶ್ರೀ ವೀರಮದಕರಿ ನಾಯಕ ವೃತ್ತದ ರಸ್ತೆ (ಹೊಂಡದ ಸರ್ಕಲ್) ಯಲ್ಲಿರುವ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ನೂತನ ದೇವಸ್ಥಾನದ ಪ್ರಾರಂಭೋತ್ಸವದ ಪೂಜಾ ಕಾರ್ಯಕ್ರಮಗಳು ಇಂದು ನಡೆಯಲಿವೆ.

ಇಂದು ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಪ್ರಾಣ ಪ್ರತಿಷ್ಠಾಪನೆ, ಶಾಂತಿ ಹೋಮ, ರುದ್ರ ಹೋಮ, ಮಹಾಪೂರ್ಣಾಹುತಿ, ಮಹಾಮಂಗಳಾರತಿ ನಂತರ ಪ್ರಸಾದ ವಿನಿಯೋಗ ಇರಲಿದೆ.

ಬೆಳಿಗ್ಗೆ 11.30 ಕ್ಕೆ ಶ್ರೀ ವೇದಮೂರ್ತಿ ಚನ್ನಯ್ಯ ಒಡೆಯರ್ ವೇದಿಕೆಯಲ್ಲಿ ನಡೆಯುವ ಧರ್ಮಸಭೆಯಲ್ಲಿ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶ್ರೀ ರಂಭಾಪುರಿ ಪ್ರಸನ್ನರೇಣುಕ ವೀರಸೋಮೇಶ್ವರ ಸ್ವಾಮೀಜಿ, ಐರಣಿಹೊಳೆಮಠದ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಜಡೇ ಸಿದ್ದೇಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ, ಚಂದ್ರಗಿರಿ ಮಠದ ಶ್ರೀ ಮುರಳೀಧರ ಸ್ವಾಮೀಜಿ, ಬಿಳಿ ಚೋಡಿನ ಡಾ. ಉದಯಶಂಕರ ಒಡೆಯರ್, ಡಾ. ನಾ. ಲೋಕೇಶ ಒಡೆಯರ್ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್, ಎಸ್. ರಾಮಪ್ಪ, ವಿಪ ಸದಸ್ಯ ಹೆಚ್. ವಿಶ್ವನಾಥ್, ಮಾಜಿ ಸಚಿವ ರಾದ ಎಸ್.ಎಸ್. ಮಲ್ಲಿಕಾರ್ಜುನ್, ಹೆಚ್. ಆಂಜ ನೇಯ, ರುದ್ರಪ್ಪ ಲಮಾಣಿ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಸೇರಿದಂತೆ, ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ಗಣ ರಾಜ್ಯೋತ್ಸವ

ಸಮಾನತೆಯ ಸಾರುವ ಈ ದಿನ
ಸಾಮಾಜಿಕ ನ್ಯಾಯ ದೊರಕಿದ ದಿನ
ನೆಮ್ಮದಿ ನೀಡಿದ ಸುದಿನ
ನಮ್ಮ ಹೆಮ್ಮೆಯ ಗಣ ರಾಜ್ಯ ದಿನ

ಜಾತ್ಯತೀತ ರಾಷ್ಟ್ರ ಉದಿತ ದಿನ
ಜಾತಿಮತ ಭೇದ ಅಳಿಸಿದ ದಿನ
ಶಾಂತಿಯ ಎಲ್ಲೆಡೆ ಸಾರಿದ ಸಂವಿಧಾನ
ಪ್ರತೀ ಭಾರತೀಯನ ಹೆಮ್ಮೆಯ ದಿನ

ಡಾ. ಅಂಬೇಡ್ಕರ ರಚಿಸಿದ ಸಂವಿಧಾನ
ದೇಶದ ಅಖಂಡತೆ ಮೆರೆದ ದಿನ
ಆಶೋತ್ತರ ಹಕ್ಕುಗಳ ಸಾರಿದ ದಿನ
ಆದರ್ಶ ತೋರಿದ ಮಹತ್ವದ ದಿನ

ಪ್ರಜಾ ಪ್ರಭುತ್ವ ಮೆರೆದ ದಿನ
ಪ್ರಜೆಗಳಿಗಾಗಿ ರೂಪಿತ ದಿನ
ಸತ್ಪ್ರಜೆಗಳಾಗಿ ಏಕತೆ ಯಿಂದ ಬಾಳೋಣ
ಭಾರತಾಂಬೆಯ ಒಗ್ಗಟ್ಟಾಗಿ ರಕ್ಷಿಸೋಣ

**- ಕೋಮಲ ವಿ ಕುಮಾರ್**, ದಾವಣಗೆರೆ.

## ಕಾಂಗ್ರೆಸ್ ಹುದ್ದೆಗಳಿಗೆ ಆಂಟನಿ ರಾಜೀನಾಮೆ

### ಬಿ.ಬಿ.ಸಿ. ಸಾಕ್ಷ್ಯಚಿತ್ರ ವಿರೋಧಿಸಿದ ನಂತರ ಪಕ್ಷದಲ್ಲಿ 'ಅಸಹಿಷ್ಣುತೆ'

ನವದೆಹಲಿ, ಜ. 25 – ಕಾಂಗ್ರೆಸ್ ಹಿರಿಯ ನಾಯಕ ಎ.ಕೆ.ಆಂಟನಿ ಅವರ ಪುತ್ರ ಅನಿಲ್ ಆಂಟನಿ ಕಾಂಗ್ರೆಸ್ ಪಕ್ಷದಲ್ಲಿನ ಎಲ್ಲಾ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ.

ಬಿ.ಬಿ.ಸಿ.ಯ ವಿವಾದಿತ ಸಾಕ್ಷ್ಯಚಿತ್ರದ ಕುರಿತು ಆಂಟನಿ ಅವರು ಪಕ್ಷಕ್ಕಿಂತ ಭಿನ್ನ ನಿಲುವು ತಳೆದಿದ್ದರು. ಭಾರತದ ಸಾರ್ವಭೌಮತ್ವವನ್ನು ಸಾಕ್ಷ್ಯಚಿತ್ರ ಕಡೆಗಣಿಸುತ್ತಿದೆ ಎಂದು ಹೇಳಿದ್ದರು.

ನನ್ನ ಈ ಹೇಳಿಕೆಯ ನಂತರ ಪಕ್ಷದಲ್ಲಿ ಅಸಹಿಷ್ಣುತೆಯ ಕರೆಗಳು ಹಾಗೂ ಅವಹೇಳನಗಳು ಎದುರಾಗಿವೆ ಎಂದು ಅನಿಲ್ ಆಂಟನಿ ತಿಳಿಸಿದ್ದಾರೆ.

ಕೆಪಿಸಿಸಿ ಡಿಜಿಟಲ್ ಮಾಧ್ಯಮ ಹಾಗೂ ಎಐಸಿಸಿ ಮಾಧ್ಯಮ ವಿಭಾಗಗಳಿಗೆ ರಾಜೀನಾಮೆ ನೀಡುತ್ತಿದ್ದೇನೆ. ಆದರೆ, ಸದ್ಯಕ್ಕೆ ಕಾಂಗ್ರೆಸ್ಸಿಗನಾಗಿ ಮುಂದುವರೆಯಲು ಬಯಸುತ್ತಿರುವುದರಿಂದ ಪ್ರಾಥಮಿಕ ಸದಸ್ಯತ್ವ ಬಿಟ್ಟಿಲ್ಲ ಎಂದವರು ತಿಳಿಸಿದ್ದಾರೆ.

ಸದ್ಯಕ್ಕೆ ರಾಜಕೀಯ ನನ್ನ ಆದ್ಯತೆಯಲ್ಲ. ನಾನು ಕಂಪ್ಯೂಟರ್ ವೃತ್ತಿಪರ. ಸಾಕಷ್ಟು ದಿನಗಳಿಂದ ಸೈಬರ್ ಡಿಜಿಟಲ್ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ ಹಾಗೂ ಅದೇ ರೀತಿ ಮುಂದುವರೆಯುತ್ತೇನೆ ಎಂದವರು ತಿಳಿಸಿದ್ದಾರೆ.

2017ರ ಗುಜರಾತ್ ಚುನಾವಣೆಯ ಸಂದರ್ಭದಲ್ಲಿ ನಾನು ಕಾಂಗ್ರೆಸ್‌ಗೆ ಸೇರಿದ್ದೆ. 2019ರಲ್ಲಿ ಪಕ್ಷದ ನಾಯಕ ಶಶಿ ಥರೂರ್ ಅವರು ಕೇಳಿದ್ದಕ್ಕಾಗಿ ಹಾಗೂ ಅವರ ಬೆಂಬಲದಿಂದ ಪಕ್ಷದಲ್ಲಿ ಕಾರ್ಯನಿರ್ವಹಿಸುತ್ತಿದ್ದೆ. ನಂತರ ನನ್ನ ವಿರುದ್ಧ ಹಲವಾರು ಕಥೆಗಳನ್ನು ಹೆಣೆಯಲಾಗಿದೆ ಹಾಗೂ ಸೈಬರ್ ಪೀಡನೆ ಮಾಡಲಾಗಿದೆ ಎಂದು ಅನಿಲ್ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷದ ಒಂದು ವರ್ಗದಿಂದ ಈ ರೀತಿಯ ವರ್ತನೆ ಎದುರಾದರೂ ನಾನು ಕಡೆಗಣಿಸಿದ್ದೆ. ಆದರೆ, ನಾನು ಬಿ.ಬಿ. ಸಿ. ಸಾಕ್ಷ್ಯಚಿತ್ರದ ಕುರಿತು ಟ್ವೀಟ್ ಮಾಡಿದ 24 ಗಂಟೆಗಳಲ್ಲಿ ಆಗಿರುವುದು ಆಘಾತಕಾರಿ ಎಂದವರು ತಿಳಿಸಿದ್ದಾರೆ.

ಪಕ್ಷದಲ್ಲಿ ಈ ರೀತಿಯ ಸಂಸ್ಕೃತಿ ಸೃಷ್ಟಿಯಾಗಿದೆ ಎನ್ನುವುದಾದರೆ, ಅಂತಹ ವಾತಾವರಣದಲ್ಲಿ ನಾನು ಕೆಲಸ ಮಾಡುವುದಿಲ್ಲ ಎಂದವರು ತಿಳಿಸಿದ್ದಾರೆ.

ನನ್ನ ಟ್ವೀಟ್ ವಾಪಸ್ ಪಡೆಯುವಂತೆ ಅಸಹಿಷ್ಣುತೆಯ ಕರೆಗಳು ಬಂದಿವೆ. ಫೇಸ್‌ಬುಕ್‌ನಲ್ಲಿ ದ್ವೇಷದ ಭಾಷೆ ಬಳಸಲಾಗಿದೆ. ದೇಶದ ಹಿತದೃಷ್ಟಿಯಿಂದ ಸಾಕ್ಷ್ಯಚಿತ್ರದಲ್ಲಿರುವುದನ್ನು ನಂಬಬಾರದು ಎಂದಷ್ಟೇ ನಾನು ಜನರಿಗೆ ಎಚ್ಚರಿಕೆ ನೀಡಿದ್ದೆ ಎಂದವರು ತಿಳಿಸಿದ್ದಾರೆ.

ಬಿಜೆಪಿ ಜೊತೆ ಸಾಕಷ್ಟು ಭಿನ್ನ ನಿಲುವುಗಳಿವೆ. ಆದರೆ, ಸಾರ್ವಭೌಮತ್ವದ ವಿಷಯದಲ್ಲಿ ರಾಜಕೀಯ ಮಾಡುವುದು ಎಂದರೆ ಬೆಂಕಿಯ ಜೊತೆ ಸರಸವಾಡಿದಂತೆ ಎಂದವರು ಎಚ್ಚರಿಸಿದ್ದಾರೆ.

ಇರಾಕ್ ಮೇಲೆ ಸಮರ ನಡೆಸಿ ಸಾವಿರಾರು ಜನರ ಸಾವಿಗೆ ಕಾರಣವಾಗಿದ್ದ ತಲೆಗಳೇ ಈಗಲೂ ಬಿ.ಬಿ.ಸಿ. ಹಿಂದಿವೆ. ಇಂಥವರು ಸಾಕ್ಷ್ಯಚಿತ್ರ ರಚಿಸಿ ಇಲ್ಲಿಗೆ ಬಂದಾಗ ಯಾವುದೇ ಕಾಳಜಿಯುಳ್ಳ ನಾಗರಿಕ ಎಚ್ಚರಿಕೆ ನೀಡುತ್ತಾನೆ. ಅದನ್ನೇ ನಾನೂ ಮಾಡಿದ್ದೆ ಎಂದವರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಜಿಲ್ಲಾ ಕಾಂಗ್ರೆಸ್‌ನಿಂದ ಗಣರಾಜ್ಯೋತ್ಸವ

ಜಿಲ್ಲಾ ಕಾಂಗ್ರೆಸ್ ವತಿಯಿಂದ ಇಂದು ಬೆಳಿಗ್ಗೆ 8 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ (ಶಾಮನೂರು ಶಿವಶಂಕರಪ್ಪ ಭವನ) ಗಣರಾಜ್ಯೋತ್ಸವ ಆಚರಿಸಲಾಗುವುದು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸುವ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಧ್ವಜಾರೋಹಣ ನೆರವೇರಿಸುವರು ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## ನಗರದಲ್ಲಿಂದು ಭಾಷಣ ಸ್ಪರ್ಧೆ

ನೆಹರು ಯುವ ಕೇಂದ್ರದ ವತಿಯಿಂದ ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಗೆ ಯುವ ಜನರ ಆಯ್ಕೆ ಕುರಿತು ಅರ್ಜಿ ಆಹ್ವಾನಿಸಲಾಗಿದೆ. ವಿವರಕ್ಕೆ ಸಂಪರ್ಕಿಸುವ ಮೊಬೈಲ್ : 9901863789.

## ಮಹಿಳೆಯರ ಖೋ ಖೋ ಪಂದ್ಯಾವಳಿ ಜಿ.ಎಂ. ತಾಂತ್ರಿಕ ವಿದ್ಯಾರ್ಥಿಗಳಿಗೆ ಪ್ರಶಸ್ತಿ



ದಾವಣಗೆರೆ, ಜ. 25- ಇತ್ತೀಚೆಗೆ ನಡೆದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮಹಿಳೆಯರ ಖೋ-ಖೋ ಪಂದ್ಯಾವಳಿಯಲ್ಲಿ ಜಿ. ಎಂ. ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿ, ಪಿ.ಇ.ಎಸ್.ಸಿ.ಇ ಮಂಡ್ಯದಲ್ಲಿ ನಡೆದ - ಬೆಂಗಳೂರು ವಲಯದಲ್ಲಿ ಪ್ರಥಮ ಸ್ಥಾನವನ್ನು ಮತ್ತು ಬಿ.ಎಲ್.ಡಿ.ಇ ವಿಜಯಪುರದಲ್ಲಿ ನಡೆದ ರಾಜ್ಯಮಟ್ಟದ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

ಜಿ ಎಂ ತಾಂತ್ರಿಕ ಮಹಾವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿಭಾಗದ ವಿದ್ಯಾರ್ಥಿಗಳಾದ ರಕ್ಷಿತಾ.ಎಚ್ ಬಿ, ಲಕ್ಷ್ಮಿ, ಚಂದನ, ಸ್ವಾತಿ, ಬಯೋಟೆಕ್ ವಿಭಾಗದ ಜನನಿ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ವಿಭಾಗದ ನಮಿತಾ, ಚಂದನ, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ವಿಭಾಗದ ಚೈತ್ರ, ದಿವ್ಯ, ಸ್ನೇಹಾ, ಇಶ್ರತ್, ರೋಬೋಟಿಕ್ಸ್ ವಿಭಾಗದ ರಂಜಿತಾ, ಸಿವಿಲ್ ವಿಭಾಗದ ಚಂದನ, ಮೆಕ್ಯಾನಿಕಲ್ ವಿಭಾಗದ ಪ್ರೀತಿ ಇವರಿಗೆ ಕಾಲೇಜಿನ ಪ್ರಾಂಶುಪಾಲ ಡಾ. ಸಂಜಯ್ ಪಾಂಡೆ ಎಂ.ಬಿ, ಕಾಲೇಜಿನ ಆಡಳಿತಾಧಿಕಾರಿ ವೈ.ಯು. ಸುಭಾಷ್ಚಂದ್ರ, ಕ್ರೀಡಾ ಸಂಯೋಜಕ ಡಾ. ಕಿರಣ್‌ಕುಮಾರ್ ಎಚ್.ಎಸ್., ಮೇಘನಾ ಜಿ.ಎಚ್., ಸಹಪ್ರಾಧ್ಯಾಪಕರು (ಕಂಪ್ಯೂಟರ್ ಸೈನ್ಸ್ ವಿಭಾಗ), ಮಂಜುಳ ಬಿ.ಕೆ., ಸಹಪ್ರಾಧ್ಯಾಪಕರು (ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಶನ್ ವಿಭಾಗ), ದೈಹಿಕ ಶಿಕ್ಷಕರಾದ ಅಜ್ಜಯ್ಯ ಜಿ ಬಿ ಹಾಗೂ ಹನುಮಂತಪ್ಪ ವೈ. ಇವರುಗಳು ಅಭಿನಂದನೆ ಸಲ್ಲಿಸಿದರು.

## ಬೀದಿ ಬದಿ ವ್ಯಾಪಾರಿಗಳಿಂದ ಅರ್ಜಿ

ದಾವಣಗೆರೆ, ಜ.25- ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಬೀದಿ ವ್ಯಾಪಾರಿಗಳ ಆತ್ಮನಿರ್ಭರ ನಿಧಿಯ ವಿಶೇಷ ಕಿರುಸಾಲ ಸೌಲಭ್ಯ ಯೋಜನೆಯಡಿ ಮಲೇಬೆನ್ನೂರು ಪುರಸಭಾ ವ್ಯಾಪ್ತಿಯ ಬೀದಿ ಬದಿ ವ್ಯಾಪಾರಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಫಲಾನುಪೇಕ್ಷಿಗಳು ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಪಿ.ಎಂ ಸ್ವ-ನಿಧಿ ಆನ್‌ಲೈನ್ ಪೋರ್ಟಲ್ http://pmsvanidhi.mohua.gov.in/ ಮೂಲಕ ಅರ್ಜಿಯನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮಲೇಬೆನ್ನೂರು ಪುರಸಭೆಯ ಡೇ-ನಲ್ಮ್ ಶಾಖೆ ಸಂಪರ್ಕಿಸಲು ಮಲೇಬೆನ್ನೂರು ಪುರಸಭಾ ಮುಖ್ಯಾಧಿಕಾರಿ ತಿಳಿಸಿದ್ದಾರೆ.

## ಅನ್‌ಮೋಲ್ ವಿದ್ಯಾಸಂಸ್ಥೆಯಲ್ಲಿ ಗಣರಾಜ್ಯೋತ್ಸವ

ಅನ್‌ಮೋಲ್ ವಿದ್ಯಾಸಂಸ್ಥೆಯಲ್ಲಿ ಇಂದು ಬೆಳಿಗ್ಗೆ 8.30ಕ್ಕೆ ಶಾಲಾ ಆವರಣದಲ್ಲಿ 74ನೇ ಗಣರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾ ಗುತ್ತಿದೆ. ಅನ್‌ಮೋಲ್ ವಿದ್ಯಾಸಂಸ್ಥೆಯ ಉಪಾಧ್ಯಕ್ಷ ರವೀಂದ್ರ ಡಿ.ವಿ. ಧ್ವಜಾರೋಹಣ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಹ ಶಿಕ್ಷಕಿ ಶ್ರೀಮತಿ ಪ್ರತಿಭಾ ಪಿ. ದೊಗ್ಗಳ್ಳಿ ಅವರು ಭಾಗವಹಿಸಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಅನ್‌ಮೋಲ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಕೊಟ್ರೇಶ್. ಯು ವಹಿಸುವರು.

## ಕುಂಬಳೂರು : ಶಾಲಾ ಕೊಠಡಿ ನಿರ್ಮಾಣಕ್ಕೆ ಶಾಸಕ ರಾಮಪ್ಪ ಚಾಲನೆ



ಮಲೇಬೆನ್ನೂರು, ಜ. 25- ಕುಂಬಳೂರು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆ ಆವರಣದಲ್ಲಿ 16 ಲಕ್ಷ ರೂ. ವೆಚ್ಚದ ನೂತನ ಕೊಠಡಿ ನಿರ್ಮಾಣಕ್ಕೆ ಶಾಸಕ ಎಸ್. ರಾಮಪ್ಪ ಬುಧವಾರ ಗುದ್ದಲಿ ಪೂಜೆ ನೆರವೇರಿಸಿ, ಕಾಮಗಾರಿಗೆ ಚಾಲನೆ ನೀಡಿದರು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಲೀಲಾ ಶಿವಕುಮಾರ್, ಉಪಾಧ್ಯಕ್ಷ ಎ.ಕೆ. ಹನುಮಂತಪ್ಪ, ಸದಸ್ಯರಾದ ನಾಗೋಳ್ ಕಲ್ಲೇಶ್, ಕಣ್ಣಾಳ್ ನಾಗೇಂದ್ರಪ್ಪ, ಶ್ರೀಮತಿ ಉಮಾ ಶಿವರಾಮಚಂದ್ರಪ್ಪ, ಶ್ರೀಮತಿ ಮಧು ತಿಮ್ಮಣ್ಣ, ಶ್ರೀಮತಿ ದುರುಗಮ್ಮ ಎ.ಕೆ. ಮಹೇಶಪ್ಪ, ಪ್ರೌಢಶಾಲಾ ವಿಭಾಗದ ಎಸ್‌ಡಿಎಂಸಿ ಅಧ್ಯಕ್ಷ ಎಂ.ಹೆಚ್. ಪರಮೇಶ್ವರಪ್ಪ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ವೈ. ಶ್ರೀನಿವಾಸ್, ಗ್ರಾಮದ ಮುಖಂಡರಾದ ಹುಲ್ಮನಿ ನಿಂಗಪ್ಪ, ಕರಡೇರ ರಾಜಪ್ಪ, ಎ.ಕೆ. ಕುಬೇರಪ್ಪ, ಎ.ಕೆ. ಮಹೇಶಪ್ಪ, ಕೆ. ಸುಭಾಶ್ಚಂದ್ರ, ಕೆ.ಅಶೋಕ, ಹೂಗಾರ್ ಹನುಮಂತಪ್ಪ, ಬಿರಗನಹಳ್ಳಿ ಶಂಭಣ್ಣ, ಬೆನ್ನೂರು ಕರಿಬಸಪ್ಪ, ಎಂ. ವಾಸುದೇವಮೂರ್ತಿ, ಹೆಚ್.ಎಂ. ಸದಾಶಿವ, ಕಾಲೇಜಿನ ಪ್ರಾಚಾರ್ಯ ರಂಗನಾಥ್, ಪ್ರೌಢಶಾಲಾ ಮುಖ್ಯ ಶಿಕ್ಷಕ ಗೋವಿಂದಪ್ಪ ಅಗಸಿಬಾಗಿಲು, ಪಿಡಿಓ ಮೂರ್ತಿ, ಜಿ.ಪಂ. ಎಇಇ ಗಿರೀಶ್, ಜೆಇ ಹನುಮಂತಪ್ಪ ಮತ್ತು ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಆದಾಪುರದ ವೀರಭದ್ರಪ್ಪ, ಮಲೇಬೆನ್ನೂರು ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿ ಕುಮಾರ್ ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/2597/2022–23 ದಿನಾಂಕ: 25.01.2023

**ಇ–ಟೆಂಡರ್ / ಸಂಧಾನ ಪ್ರಕಟಣೆ ಸಂಖ್ಯೆ: 10/2022–23**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ, ಹರಿಹರ ಬಸ್ ನಿಲ್ದಾಣದ ದ್ವಿ–ಚಕ್ರ ವಾಹನ ನಿಲ್ದಾಣ (ತೆರೆದ ಸ್ಥಳ 03 ವರ್ಷ) ಕ್ಕೆ ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್) ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.
ಹಾಗೂ ಮಲೇಬೆನ್ನೂರು ಜನರಲ್ ಮಳಿಗೆ ಸಂಖ್ಯೆ–01 ಕ್ಕೆ (ಶಾಶ್ವತ ಸ್ಥಳ 05 ವರ್ಷ) ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ ಮೂಲಕ (ಮಾತುಕತೆಯ ಮೂಲಕ) ಅರ್ಜಿ ಆಹ್ವಾನಿಸಲಾಗಿದೆ.
ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ದಿ: 25.01.2023 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ–577 002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿಗಳು–7760990452, ಸಹಾಯಕ ಸಂಚಾರ ಅಧೀಕ್ಷಕರು–7022030183.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ

ವಾ.ಸಾ.ಸಂ.ಇ/ಬೆಂ.ನಗರ/4319/ಆಕಾರ್/2021–22

ನವ ಭಾರತಕ್ಕಾಗಿ
ನವ ಕರ್ನಾಟಕ

# ಸಮಸ್ತ ಜನತೆಗೆ 74ನೇ ಗಣರಾಜ್ಯೋತ್ಸವದ ಶುಭಾಶಯಗಳು




"ಎಲ್ಲಿಯ ತನಕ ನೀವು ಸಾಮಾಜಿಕ ಸ್ವಾತಂತ್ರ್ಯವನ್ನು ಸಾಧಿಸುವುದಿಲ್ಲವೋ, ಅಲ್ಲಿಯ ತನಕ ಕಾನೂನು ಒದಗಿಸುವ ಯಾವುದೇ ಸ್ವಾತಂತ್ರ್ಯವನ್ನು ಪಡೆದರೂ ಅದರ ಪ್ರಯೋಜನ ಬರುವುದಿಲ್ಲ".
- ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಥಾವರ್ ಚಂದ್ ಗೆಹ್ಲೋಟ್
ಸನ್ಮಾನ್ಯ ರಾಜ್ಯಪಾಲರು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

# ಶಕ್ತಿಶಾಲಿ ಭಾರತಕ್ಕಾಗಿ ಸದೃಢ ಕರ್ನಾಟಕ ನಿರ್ಮಿಸಲು ಸಂಕಲ್ಪ



## ಅಭಿವೃದ್ಧಿ–ಜನ ಕಲ್ಯಾಣಕ್ಕಾಗಿ ಹಲವಾರು ವಿಶೇಷ ಯೋಜನೆಗಳ ಅನುಷ್ಠಾನ

- **ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆ: 10 ಲಕ್ಷಕ್ಕೂ** ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಯೋಜನ. ಈವರೆಗೆ **ರೂ.483.62 ಕೋಟಿ** ಮೊತ್ತದ ವಿದ್ಯಾರ್ಥಿವೇತನ ವಿತರಣೆ
- ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ **ಪಿಂಚಣಿ ಮೊತ್ತದಲ್ಲಿ ಹೆಚ್ಚಳ. 75 ಲಕ್ಷಕ್ಕೂ ಹೆಚ್ಚಿನ ಜನರಿಗೆ ಪ್ರಯೋಜನ**
- **ವಸತಿ ಯೋಜನೆ:** ಮೂರು ವರ್ಷಗಳಲ್ಲಿ ಸುಮಾರು **5 ಲಕ್ಷ ಮನೆಗಳ** ನಿರ್ಮಾಣ.
- **ಆರೋಗ್ಯ: ರೂ.1,000 ಕೋಟಿ** ವೆಚ್ಚದಲ್ಲಿ **ಸಮುದಾಯ ಆರೋಗ್ಯ ಕೇಂದ್ರಗಳಾಗಿ 100** ಪ್ರಾಥಮಿಕ ಆರೋಗ್ಯ ಕೇಂದ್ರಗಳ ಉನ್ನತೀಕರಣ
- **ರಾಜ್ಯದ ವಿವಿಧೆಡೆ 438 'ನಮ್ಮ ಕ್ಲಿನಿಕ್'ಗಳ ಆರಂಭ**
- **ಯಶಸ್ವಿನಿ ಯೋಜನೆಯ** ಪುನರ್ ಪ್ರಾರಂಭ
- **ಸ್ತ್ರೀ ಸಾಮರ್ಥ್ಯ** ಯೋಜನೆಯಡಿ **33,333 ಮಹಿಳಾ ಸ್ವಸಹಾಯ ಗುಂಪುಗಳಿಗೆ ತಲಾ ರೂ.1.5 ಲಕ್ಷ ಮೂಲಧನ.** ಇದರಿಂದ **3.9 ಲಕ್ಷ ಮಹಿಳೆಯರಿಗೆ** ಸಹಾಯವಾಗಲಿದೆ.
- ಕೊಳಚೆ ಪ್ರದೇಶಗಳ **3.36 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ** ನೀಡಲು ಐತಿಹಾಸಿಕ ನಿರ್ಧಾರ. **1.14 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ** ನೀಡಲಾಗಿದೆ.
- ವಿದ್ಯುನ್ಮಾನ **ಆಡಳಿತ ಉಪಕ್ರಮಗಳಾದ ಗ್ರಾಮ ಒನ್, ಜನಸೇವಕ್, ಸಾರಿಗೆ ಇಲಾಖೆಯಲ್ಲಿ ಆನ್‌ಲೈನ್ ಸೇವೆ, ಇತ್ಯಾದಿ ಸೇವೆಗಳ ಆರಂಭ.**
- ಇಡೀ ದೇಶದಲ್ಲಿಯೇ **ರಾಷ್ಟ್ರೀಯ ಶಿಕ್ಷಣ ನೀತಿ 2020** ಅನ್ನು ಅನುಷ್ಠಾನ ಮಾಡಿದ ಮೊದಲ ರಾಜ್ಯ ಕರ್ನಾಟಕ.
- **15,000 ಶಾಲಾ ಶಿಕ್ಷಕರ** ನೇಮಕಾತಿ, **8,101 ಶಾಲಾ ಕೊಠಡಿಗಳ** ನಿರ್ಮಾಣ, ಎಲ್ಲಾ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ
- ನಗರ ಹಾಗೂ ಗ್ರಾಮೀಣ ಮಟ್ಟದಲ್ಲಿ ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸುವ ಉದ್ದೇಶದಿಂದ **75ನೇ ಸ್ವಾತಂತ್ರ್ಯ ದಿನಾಚರಣೆಯ ಸ್ಮರಣೆಯಾಗಿ ಅಮೃತ್ ಯೋಜನೆಗಳಿಗೆ ಚಾಲನೆ.**

  ದುರ್ಬಲ ವರ್ಗಗಳ ಜನರನ್ನು ಮೇಲೆತ್ತುವುದು, ಸ್ವಸಹಾಯ ಗುಂಪುಗಳಿಗೆ ಮೂಲಧನ ನೀಡುವುದು, ಎಸ್.ಸಿ./ಎಸ್.ಟಿ, ಇತರೆ ಹಿಂದುಳಿದ ಯುವಕರ ಹಾಗೂ **ಮಹಿಳಾ ಉದ್ಯಮಿಗಳ ನವೋದ್ಯಮಗಳಿಗೆ ಪ್ರೋತ್ಸಾಹ** ನೀಡುವುದು ಸಹ ಈ ಯೋಜನೆಗಳ ಉದ್ದೇಶ
- ಹಿಂದುಳಿದ ವರ್ಗಗಳ ಕಲ್ಯಾಣ, ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣಗಳ ಇಲಾಖೆಗಳಡಿ ಬರುವ **19 ವಿವಿಧ ನಿಗಮಗಳಿಗೆ ರೂ.857.75 ಕೋಟಿ ಹೆಚ್ಚುವರಿ** ಅನುದಾನ.
- ಗ್ರಾಮೀಣ ಪ್ರದೇಶಗಳಲ್ಲಿ ಕಿರು ಉದ್ಯಮಗಳಿಗೆ ಬೆಂಬಲ ನೀಡಲು **ಸ್ವಾಮಿ ವಿವೇಕಾನಂದ ಯುವಶಕ್ತಿ ಸಂಘ** ಯೋಜನೆ. **5 ಲಕ್ಷ** ಯುವಕರಿಗೆ ಪ್ರಯೋಜನದ ನಿರೀಕ್ಷೆ.
- **ಪರಿಶಿಷ್ಟ ಜಾತಿ/ವರ್ಗಗಳಿಗೆ** ಮೀಸಲಾತಿಯನ್ನು ಕ್ರಮವಾಗಿ **ಶೇ.15 ರಿಂದ ಶೇ.17ರವರೆಗೆ ಹಾಗೂ ಶೇ.3 ರಿಂದ ಶೇ.7ರವರೆಗೆ ಹೆಚ್ಚಿಸಲಾಗಿದೆ.**
- ದಾಖಲೆ ರಹಿತ **1,475** ಜನವಸತಿಗಳನ್ನು ಕಂದಾಯ ಗ್ರಾಮಗಳಾಗಿ **ಘೋಷಣೆ.** ದಾಖಲೆಯ **52,000** ಜನರಿಗೆ ಹಕ್ಕುಪತ್ರ ವಿತರಣೆ

## ಕೇಂದ್ರ ಸರ್ಕಾರದ ಯೋಜನೆಗಳ ಯಶಸ್ವಿ ಅನುಷ್ಠಾನ

- **ಪಿಎಂ–ಕಿಸಾನ್ ಯೋಜನೆಯಡಿ** ರಾಜ್ಯದ **53.83 ಲಕ್ಷ ರೈತರಿಗೆ** ಪ್ರಯೋಜನ. ಈವರೆಗೆ ಕೇಂದ್ರದಿಂದ **ರೂ.9,982.15 ಕೋಟಿ** ವಿತರಣೆ.
- ಪ್ರಧಾನಮಂತ್ರಿ ಉಜ್ವಲ ಯೋಜನೆಯಿಂದ **34.66 ಲಕ್ಷ** ಕುಟುಂಬಗಳಿಗೆ ಪ್ರಯೋಜನ.
- ಪಿಎಂ ಸ್ವನಿಧಿ ಯೋಜನೆಯಡಿ **2.39 ಲಕ್ಷ** ಬೀದಿ ವ್ಯಾಪಾರಿಗಳಿಗೆ ಸಾಲ ಮಂಜೂರು.
- ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ ರಾಜ್ಯದ **4.50 ಲಕ್ಷ ಫಲಾನುಭವಿಗಳಿಗೆ** ಪ್ರಯೋಜನ.
- ಜಲಜೀವನ್ ಮಿಷನ್ ಅಡಿ **6.51 ಲಕ್ಷ** ಗ್ರಾಮೀಣ ಮನೆಗಳಿಗೆ ನಳ ಸಂಪರ್ಕ.
- **ಬೆಟ್ಟಕುರುಬ ಸಮುದಾಯವನ್ನು ಪರಿಶಿಷ್ಟ ವರ್ಗಗಳಡಿ ಭಾರತ ಸರ್ಕಾರ ಸೇರಿಸಿದೆ.**

## ದೆಹಲಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ರಾಜ್ಯದಿಂದ ಪಾಲ್ಗೊಳ್ಳುತ್ತಿರುವ 'ನಾರಿ ಶಕ್ತಿ' ವಿಷಯಾಧಾರಿತ ಸ್ತಬ್ಧ ಚಿತ್ರ




## ಹೂಡಿಕೆಯಲ್ಲಿ ರಾಜ್ಯ ದೇಶದಲ್ಲೇ ಅಗ್ರಸ್ಥಾನದಲ್ಲಿ

- **2022ರಲ್ಲಿ ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆ ಸಭೆಯಲ್ಲಿ ರೂ.52,000 ಕೋಟಿ ಮೊತ್ತದ** ಬಂಡವಾಳ ಹೂಡಿಕೆ ಒಪ್ಪಂದಗಳಿಗೆ ಸಹಿ.
- **2022ರ ನವೆಂಬರ್‌ನಲ್ಲಿ ರಾಜ್ಯದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ರೂ.9.8 ಲಕ್ಷ ಕೋಟಿ ಮೊತ್ತದ ಹೂಡಿಕೆ ಒಪ್ಪಂದಗಳಿಗೆ ಸಹಿ. ಇದರಿಂದ 6 ಲಕ್ಷ ಉದ್ಯೋಗ ಅವಕಾಶಗಳ ಸೃಷ್ಟಿ. ಈ ಬಂಡವಾಳ ಹೂಡಿಕೆಯ ಶೇ. 90ರಷ್ಟು ಭಾಗ ಬೆಂಗಳೂರಿಂದ ಹೊರಗೆ ರಾಜ್ಯದ ವಿವಿಧೆಡೆಗಳಲ್ಲಿ ಹೂಡಿಕೆಯಾಗುತ್ತದೆ.**
- **ನೀತಿ ಆಯೋಗದ ಇಂಡಿಯಾ ಇನ್ನೋವೇಷನ್ ಇಂಡೆಕ್ಸ್, 2022ರಲ್ಲಿ ಕರ್ನಾಟಕ ಮೊದಲ ಸ್ಥಾನ ಗಳಿಸಿದೆ.**

## ಮೂಲಭೂತ ಸೌಕರ್ಯ

- **ಮೈಸೂರು–ಬೆಂಗಳೂರು–ಚೆನ್ನೈಗೆ ತ್ವರಿತ ಸಂಪರ್ಕ ಕಲ್ಪಿಸುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ**
- **ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆ, ಹಾಸನ ವಿಮಾನ ನಿಲ್ದಾಣದ ಕಾಮಗಾರಿಗಳು ಪ್ರಗತಿಯಲ್ಲಿ, ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿ**
- **ಮೈಸೂರಿನ ನಾಗನಹಳ್ಳಿಯಲ್ಲಿ ಹೊಸ ಕೋಚಿಂಗ್ ಕಾಂಪ್ಲೆಕ್ಸ್, ಇದರಿಂದ ಕಡಿಮೆ ದೂರದ ರೈಲುಗಳನ್ನು ಆರಂಭಿಸಲು ಅನುಕೂಲ.**
- **ರೂ.2 ಲಕ್ಷ ಕೋಟಿ ವೆಚ್ಚದಲ್ಲಿ ವಿವಿಧ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ**

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

# ಲೋಕ್ ಶಕ್ತಿ ಪಾರ್ಟಿ ಬಲಪಡಿಸಲು ಕರೆ

## ಜಿಲ್ಲಾ ಘಟಕ ಉದ್ಘಾಟಿಸಿದ ರಾಜ್ಯಮಹಿಳಾ ಘಟಕದ ಅಧ್ಯಕ್ಷೆ ಮಮತಾ ಪಾಟೀಲ್



ದಾವಣಗೆರೆ, ಜ.25- ಮಾಜಿ ಮುಖ್ಯಮಂತ್ರಿ ದಿ.ರಾಮಕೃಷ್ಣ ಹೆಗಡೆ ಅವರು ಸ್ಥಾಪಿಸಿದ್ದ ಲೋಕ್ ಶಕ್ತಿ ಪಾರ್ಟಿಯನ್ನು ಜಿಲ್ಲೆಯಲ್ಲೂ ಬಲ ಪಡಿಸುವಂತೆ ಪಾರ್ಟಿಯ ಮಹಿಳಾ ಘಟಕದ ರಾಜ್ಯಾಧ್ಯಕ್ಷರಾದ ಮಮತಾ ಪಾಟೀಲ್ ಕರೆ ನೀಡಿದ್ದಾರೆ.

ನಗರದ ರೋಟರಿ ಬಾಲಭವನದಲ್ಲಿ ಬುಧವಾರ ದಾವಣಗೆರೆ ಜಿಲ್ಲಾ ಘಟಕವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ದಿ.ರಾಮಕೃಷ್ಣ ಹೆಗಡೆ ಅವರಿಗೆ ಸಾಕಷ್ಟು ಅಭಿಮಾನಿಗಳಿದ್ದಾರೆ. ಅವರೊಬ್ಬ ಸರಳ, ಸಜ್ಜನಿಕೆಯ ಧೀಮಂತ, ನಿಷ್ಠಾವಂತ ರಾಜಕಾರಣಿಯಾಗಿದ್ದರು. ಅವರಂತೆ ಇರಲು ಇದುವರೆಗೂ ಯಾವ ರಾಜಕಾರಣಿಗೂ ಸಾಧ್ಯವಾಗಿಲ್ಲ ಎಂದರು.

ಹೆಗಡೆ ಅವರ ಪರಂಪರೆ ಮುಂದುವರೆಸುವ ಉದ್ದೇಶದಿಂದ ಕರ್ನಾಟಕದಾದ್ಯಂತ ಲೋಕ್ ಶಕ್ತಿ ಪಾರ್ಟಿಯನ್ನು ಬಲಪಡಿಸಲು ಚಿಂತಿಸಲಾಗಿದೆ. ಬರಲಿರುವ ವಿಧಾನಸಭಾ ಚುನಾವಣೆಗೆ ದಾವಣಗೆರೆಯ ಎಲ್ಲಾ ಕ್ಷೇತ್ರಗಳಲ್ಲೂ ನಮ್ಮ ಪಕ್ಷದಿಂದ ಒಬ್ಬರು ಸ್ಪರ್ಧಿಸಬೇಕಿದೆ ಎಂದು ಹೇಳಿದರು.

ಮಹಿಳೆಯರಿಗಾಗಿ ಶೇ.25ರಷ್ಟು ಮೀಸಲಾತಿ ಕಲ್ಪಿಸಿದ್ದು, ರಾಮಕೃಷ್ಣ ಹೆಗಡೆಯವರು. ಈ ಹಿನ್ನೆಲೆಯಲ್ಲಿ ಮಹಿಳೆಯರೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಪಕ್ಷದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಬೇಕು. ಪುರುಷರು ಇದಕ್ಕೆ ಅವಕಾಶ ಕಲ್ಪಿಸಿ, ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಸಾಪುರದ ಶ್ರೀ ರೇವಣಸಿದ್ದೇಶ್ವರ ವಿದ್ಯಾಸಂಸ್ಥೆ ಅಧ್ಯಕ್ಷ ಎಂ.ಎಸ್. ನಾಗರಾಜಪ್ಪ ಮಾತನಾಡುತ್ತಾ, ಸ್ವಾತಂತ್ರ್ಯಕ್ಕಾಗಿ ಸ್ವಾತಂತ್ರ್ಯ ಪೂರ್ವದಲ್ಲಿದ್ದ ಕಾಂಗ್ರೆಸ್ ವಿಸರ್ಜಿಸುವಂತೆ ಮಹಾತ್ಮ ಗಾಂಧಿಯವರು ಹೇಳಿದ್ದರೂ, ಕಳೆದ 70 ವರ್ಷಗಳಿಂದ ಕಾಂಗ್ರೆಸ್‌ನ ಅನುವಂಶೀಯರು ಅದನ್ನು ಬೆಳೆಸುತ್ತಾ ಬಂದರು.

ವಿಪಕ್ಷಗಳು ಇಲ್ಲದ, ಇದ್ದರೂ ಹರಿದು ಹೋಗಿದ್ದ ಸಂದರ್ಭದಲ್ಲಿ ಕಾಂಗ್ರೆಸ್‌ಗೆ ಪರ್ಯಾಯವಾಗಿ ಜನತಾ ಪಾರ್ಟಿ ಕಟ್ಟಲಾಯಿತು. ಅದರಲ್ಲೂ ಅನೇಕ ಭಿನ್ನಾಭಿಪ್ರಾಯಗಳಿದ್ದವು. ಪ್ರಸ್ತುತ ದಿನಗಳಲ್ಲಿ ಪರ್ಯಾಯ ಶಕ್ತಿಯಾಗಿ ಲೋಕ್ ಶಕ್ತಿ ಪಾರ್ಟಿ ಬೆಳೆಯಲಿದೆ ಎಂದರು.

ಇದೇ ಸಂದರ್ಭದಲ್ಲಿ ಲೋಕ್ ಶಕ್ತಿ ಪಾರ್ಟಿ ಜಿಲ್ಲಾ ಘಟಕದ ಸಂಚಾಲಕರಾಗಿದ್ದ ಬಸವರಾಜಪ್ಪ ನೀರ್ಥಡಿ ಅವರನ್ನು ಜಿಲ್ಲಾಧ್ಯಕ್ಷರನ್ನಾಗಿ ಘೋಷಿಸಿ, ಪಕ್ಷದ ಬಾವುಟ ಹಾಗೂ ಪ್ರಮಾಣ ಪತ್ರ ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ದಾವಣಗೆರೆ ಏಳು ವಿಧಾನಸಭಾ ಕ್ಷೇತ್ರದಗಳಿಂದಲೂ ಪಕ್ಷದಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಚಿಂತನೆ ಇದೆ. ಕೆಲ ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಅಭ್ಯರ್ಥಿಗಳು ತಯಾರಿದ್ದಾರೆ. ಮುಂದಿನ ದಿನಗಳಲ್ಲಿ ಪಕ್ಷವನ್ನು ಮತ್ತಷ್ಟು ಬಲ ಪಡಿಸಲಾಗುವುದು ಎಂದರು.

ರಾಜ್ಯಾಧ್ಯಕ್ಷ ಚಂದ್ರಶೇಖರ್ ವಿ. ಸ್ಥಾವರಮಠ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಘಟಕದ ಸಹ ಸಂಚಾಲಕ ಎಂ.ಎಸ್. ಶಿವಕುಮಾರ ಸ್ವಾಮಿ ಉಪಸ್ಥಿತರಿದ್ದರು. ಸದಾನಂದ ನಿರೂಪಿಸಿದರು. ವಿಠೋಬರಾವ್ ಪ್ರಾರ್ಥಿಸಿದರು.

# ಉತ್ತಮ 'ರಾಜರಿಗಾಗಿ' ಮತದಾನ ಹೆಚ್ಚಾಗಲಿ

# ರಾಷ್ಟ್ರೀಯ ಮತದಾರರ ದಿನಾಚರಣೆಯಲ್ಲಿ ಕರೆ



ದಾವಣಗೆರೆ, ಜ. 25 – ಮತದಾರರಾದ ಪ್ರಜೆಗಳೇ ತಮ್ಮ 'ರಾಜ'ರನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ಸಂವಿಧಾನ ನೀಡಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮತದಾರರು ಈ ಅಧಿಕಾರ ಚಲಾಯಿಸಿ, ಉತ್ತಮ ಆಡಳಿತಗಾರರನ್ನು ಆಯ್ಕೆ ಮಾಡಬೇಕೆಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಕರೆ ನೀಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ಹಾಗೂ ನಗರ ಪಾಲಿಕೆಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದಲ್ಲಿ ಇಂದು ಆಯೋಜಿಸಲಾಗಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. 'ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಖಚಿತವಾಗಿ ಮತದಾನ ಮಾಡುವೆ' ಎಂಬ ಧ್ಯೇಯವಾಕ್ಯದೊಂದಿಗೆ 13ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಆಚರಿಸಲಾಯಿತು.

ಸ್ವಾತಂತ್ರ್ಯಕ್ಕೆ ಮುಂಚೆ 'ಯಥಾ ರಾಜ ತಥಾ ಪ್ರಜಾ' ಎಂಬ ಮಾತಿಗೆ ಅರ್ಥವಿತ್ತು. ಈಗ ಮತದಾರರೇ ಸರ್ಕಾರ ನಿರ್ಧರಿಸುವುದರಿಂದ 'ಯಥಾ ಪ್ರಜಾ ತಥಾ ರಾಜ' ಎನ್ನುವುದೇ ಸೂಕ್ತ ಎಂದರು.

ಮುಂದಿನ ಚುನಾವಣೆಯಲ್ಲಿ ಮತದಾರರೆಲ್ಲರೂ ಮತ ಚಲಾಯಿಸಬೇಕು. ಒಂದು ವೇಳೆ ಸ್ಪರ್ಧಿಸಿದ ಅಭ್ಯರ್ಥಿಗಳಲ್ಲಿ ಯಾರೂ ಇಷ್ಟವಾಗದಿದ್ದರೆ 'ನೋಟಾ'ಗೆ ಮತ ನೀಡಿಯಾದರೂ ತಮ್ಮ ಹಕ್ಕು ಬಳಸಿಕೊಳ್ಳಬೇಕು ಎಂದವರು ಕರೆ ನೀಡಿದರು.

ಚುನಾವಣಾ ಪ್ರಕ್ರಿಯೆ ಸುಧಾರಿಸಲು ನಿರಂತರ ಪ್ರಯತ್ನಗಳು ನಡೆದಿವೆ. ಚುನಾವಣಾ ಸಾಕ್ಷರತಾ ಕೂಟಗಳನ್ನೂ ರಚಿಸಲಾಗಿದೆ. ಈ ಕೂಟಗಳ ಮೂಲಕ ಬರುವ ಸಲಹೆಗಳನ್ನು ಚುನಾವಣಾ ಆಯೋಗ ಪರಿಗಣಿಸುತ್ತಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಚೆನ್ನಪ್ಪ, ಸುಭದ್ರ, ಸದೃಢ ಭಾರತ ಕಟ್ಟಲು ಚುನಾವಣೆಯಲ್ಲಿ ಮತದಾರರು ಸಕ್ರಿಯವಾಗಿ ಭಾಗವಹಿಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕಾಪಶಿ ಅವರು ಮತದಾರರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಹೊಸ ಮತದಾರರಿಗೆ ಗುರುತಿನ ಚೀಟಿಗಳನ್ನು ವಿತರಿಸಲಾಯಿತು. ಶಾಲಾ-ಕಾಲೇಜುಗಳಲ್ಲಿ ಮತದಾರರ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಸಮಾರಂಭದಲ್ಲಿ ಉಪ ವಿಭಾಗಾಧಿಕಾರಿ ದುರ್ಗಾಶ್ರೀ, ಪಾಲಿಕೆ ಆಯುಕ್ತರಾದ ರೇಣುಕಾ, ಡಿಡಿಪಿಐ ತಿಪ್ಪೇಶಪ್ಪ, ಜಿಲ್ಲಾ ಪಂಚಾಯ್ತಿ ಮುಖ್ಯ ಯೋಜನಾಧಿಕಾರಿ ಮಲ್ಲಾ ನಾಯ್ಕ, ಪ್ರಭಾರಿ ತಹಶೀಲ್ದಾರ್ ಅಶ್ವತ್ಥ್ ಮತ್ತಿತರರು ಉಪಸ್ಥಿತರಿದ್ದರು.

### ಮತದಾನದಲ್ಲಿ ನಗರದ ಸುಶಿಕ್ಷಿತರಿಗಿಂತ ವಿಕಲಚೇತನರೇ ಮುಂದೆ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ವಿಕಲಚೇತನರಲ್ಲಿ ಶೇ.97ರಷ್ಟು ಜನ ಮತದಾನ ಮಾಡಿದ್ದಾರೆ. ಆದರೆ, ನಗರದ ಸುಶಿಕ್ಷಿತರಿರುವ ಪ್ರದೇಶಗಳಲ್ಲಿ ಶೇ.64ರಷ್ಟು ಮಾತ್ರ ಮತದಾನವಾಗಿದೆ ಎಂದು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಚೆನ್ನಪ್ಪ ಹೇಳಿದರು.

ಗ್ರಾಮಾಂತರ ಜನರೂ ಹೆಚ್ಚಾಗಿ ಮತದಾನ ಮಾಡುತ್ತಿದ್ದಾರೆ. ಆದರೆ, ನಗರದಲ್ಲಿರುವ ಸುಶಿಕ್ಷಿತರೇ ಮತದಾನ ಮಾಡದ ಕಾರಣ, ಒಟ್ಟಾರೆ ಮತದಾನ ಪ್ರಮಾಣ ಕಡಿಮೆಯಾಗುತ್ತಿದೆ ಎಂದವರು ಹೇಳಿದರು.

## ಪೊಲೀಸ್ ಠಾಣೆ ಮುಂದೆಯೇ ಜಗಳ : ಬಿಡಿಸಲು ಹೋದ ಪೊಲೀಸರ ಮೇಲೆ ಹಲ್ಲೆ

ದಾವಣಗೆರೆ, ಜ.25- ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆ ಮುಂದೆಯೇ ಜಗಳವಾಡುತ್ತಿದ್ದ ಇಬ್ಬರು ಯುವತಿಯರ ಜಗಳ ಬಿಡಿಸಲು ಹೋದ ಪೊಲೀಸರ ಮೇಲೆಯೇ ಹಲ್ಲೆ ಮಾಡಿದ ಆರೋಪದಲ್ಲಿ ಮೂವರನ್ನು ಇಲ್ಲಿನ ವಿದ್ಯಾನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಪ್ರಕರಣ ಸಂಬಂಧ ಇಬ್ಬರು ಯುವತಿಯರು ಹಾಗೂ ಮಂಜುನಾಥ ಮತ್ತು ಹರ್ಷ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ. ಮುಂಬಯಿ ಮೂಲದ ಇಬ್ಬರು ಯುವತಿಯರು ಇವೆಂಟ್ ಮ್ಯಾನೇಜ್ಮೆಂಟ್‌ಗಾಗಿ ಶಿಕಾರಿಪುರ ಮೂಲದ ವಕೀಲರಾದ ಮಂಜುನಾಥ, ಹರ್ಷ ಎಂಬುವರು ದಾವಣಗೆರೆಗೆ ಕರೆಸಿದ್ದರು. ಈ ವೇಳೆ ಹಣಕಾಸಿನ ವಿಚಾರವಾಗಿ ಇವರ ಮಧ್ಯೆ ಮಾತಿನ ಚಕಮಕಿ ನಡೆದಿದೆ. ಅಂತಿಮವಾಗಿ ಠಾಣೆಯ ಎದುರಿನಲ್ಲೇ ಜಗಳವಾಡುತ್ತಿದ್ದ ಯುವತಿಯರನ್ನು ಬಿಡಿಸಲು ಹೋದ ವೇಳೆ ಈ ಘಟನೆ ನಡೆದಿದೆ. ಯುವತಿಯರಿಗೆ ಹಣ ಕೊಡದ ಹಿನ್ನೆಲೆಯಲ್ಲಿ ಕುಡಿದ ಮತ್ತಿನಲ್ಲಿದ್ದ ಯುವತಿಯರು ಠಾಣೆ ಬಳಿ ಮಂಜುನಾಥ, ಹರ್ಷ ಜತೆ ತಡರಾತ್ರಿ ಜಗಳವಾಡಿದ್ದಾರೆ. ಈ ವೇಳೆ ಜಗಳ ನಿಲ್ಲಿಸಲು ಹೋದ ಪೊಲೀಸರ ಮೇಲೆ ಹಲ್ಲೆ ಮಾಡಿದ್ದರಿಂದ ಪೊಲೀಸ್ ಪೇದೆಗೆ ಗಾಯಗಳಾಗಿವೆ.

## ಕೊಟ್ಟೂರು : ತರಳಬಾಳು ಹುಣ್ಣಿಮೆ ಮೂಲಭೂತ ಸಿದ್ಧತೆ ಪರಿಶೀಲನೆ



ಕೊಟ್ಟೂರು, ಜ. 25 - ತರಳಬಾಳುಹುಣ್ಣಿಮೆ ನಡೆಯುವ ಮಹಾಮಂಟಪ ಹಾಗೂ ಕ್ರೀಡಾ ಮೈದಾನಗಳಿಗೆ ಬೇಕಾದ ಮೂಲಭೂತ ಸೌಕರ್ಯಗಳ ಪರಿಶೀಲನೆ ಹಾಗೂ ಸಿದ್ದತಾ ಕಾರ್ಯಗಳ ಮಾಹಿತಿಯನ್ನು ತಹಶೀಲ್ದಾರ್ ಇಂದು ಭೇಟಿ ನೀಡಿ ಪಡೆದರು.

ಈ ಸಂದರ್ಭದಲ್ಲಿ ತರಳಬಾಳು ಹುಣ್ಣಿಮೆ ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಬಿ.ಸಿ ಮೂಗಪ್ಪ, ಪ್ರಧಾನ ಕಾರ್ಯದರ್ಶಿ ಎಸ್. ರಾಜೇಂದ್ರಪ್ರಸಾದ್ ರವರು ಕಂದಾಯ ನಿರೀಕ್ಷಕರು ಹಾಜರಿದ್ದರು.

## ಸ್ವಾತಂತ್ರ್ಯ ಹೋರಾಟಗಾರರ ಸಂಘದಿಂದ ಗಣರಾಜ್ಯೋತ್ಸವ

ದಾವಣಗೆರೆ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಹಾಗೂ ಉತ್ತರಾಧಿಕಾರಿಗಳ ಸಂಘದಿಂದ ಇಂದು ಬೆಳಿಗ್ಗೆ 10.30 ಕ್ಕೆ 73ನೇ ಗಣರಾಜ್ಯೋತ್ಸವವನ್ನು ರಾಮನಗರದಲ್ಲಿರುವ ಗಾಂಧಿ ಭವನದಲ್ಲಿ ಆಚರಿಸಲಾಗುವುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ವೈ.ಎಸ್. ನಾಗಲಿಂಗಪ್ಪ ತಿಳಿಸಿದ್ದಾರೆ. ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಭಾರತ ದೇಶದ ಎಮಿನೆಂಟ್ ಮೆಂಬರ್ ಹೆಚ್. ಮರುಳಸಿದ್ದಪ್ಪ ಅವರು ಅಧ್ಯಕ್ಷತೆ ವಹಿಸುವರು. ಜಿಲ್ಲಾ ಅಧ್ಯಕ್ಷ ಇಂದೂಧರ್ ನಿಶಾನಿಮಠ್ ನೇತೃತ್ವ ವಹಿಸುವರು.

## ನಗರದ ಇಂದು ಶ್ರೀನಿವಾಸ ಕಲ್ಯಾಣೋತ್ಸವ

ದಾವಣಗೆರೆ ದೇವರಾಜ ಅರಸು ಬಡಾವಣೆ ಎ ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಶ್ರೀ ದೇವಿ ಪ್ರತಿಷ್ಠಾಪನೆಯ ರಜತ ಮಹೋತ್ಸವ



ಕಾರ್ಯಕ್ರಮವು ಆರಂಭಗೊಂಡಿದ್ದು, ಇಂದು ವಿಶೇಷ ಪೂಜೆಗಳು ನಡೆಯಲಿವೆ. ಬೆಳಿಗ್ಗೆ 8 ಕ್ಕೆ ಶ್ರೀ ಅಮ್ಮನವರಿಗೆ ಪಂಚಾಮೃತ ಅಭಿಷೇಕ, ಅಲಂಕಾರ, ಪುಷ್ಪಾರ್ಚನೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಜರುಗಲಿದೆ. ನಂತರ ಸಂಜೆ 5.30ಕ್ಕೆ ಶ್ರೀ ಶ್ರೀನಿವಾಸ ಕಲ್ಯಾಣ ನಡೆಯಲಿದೆ. ಬೆಂಗಳೂರಿನ ಶ್ರೀ ವಾರಿ ಫೌಂಡೇಶನ್ನಿನ ವೇ.ಬ್ರ. ಶ್ರೀ ವೆಂಕಟೇಶಮೂರ್ತಿ ಮತ್ತು ಸಂಗಡಿಗರು ಶ್ರೀನಿವಾಸ ಕಲ್ಯಾಣೋತ್ಸವವನ್ನು ನಡೆಸಿಕೊಡುವರು.

ಇದೇ ಸಂದರ್ಭದಲ್ಲಿ ತಪಸ್ಯ ವಾಸವಿ ನೃತ್ಯಾಲಯ ಮಕ್ಕಳಿಂದ ನೃತ್ಯ ಪ್ರದರ್ಶನ ಜರುಗಲಿವೆ. ಲಕ್ಷ್ಮಿ ಅಜಿತ್ ಮತ್ತು ಭಕ್ತಾದಿಗಳಿಂದ ದಾಂಡಿಯ ರಾಸ್ ಏರ್ಪಾಡಾಗಿದೆ.

# ಆರಂಭಿಕ ಹಂತದಲ್ಲಿದ್ದ ಮಕ್ಕಳಿಗೇ ಕಲಿಕಾ ನಷ್ಟ ತೀವ್ರ

### ಕೊರೊನಾದಿಂದ ಆದ ಕಲಿಕಾ ನಷ್ಟದ ವರದಿ

ನವದೆಹಲಿ, ಜ. 25 – ಕೊರೊನಾ ನಂತರ ಅತಿ ಹೆಚ್ಚಿನ ಹಾನಿಯಾಗಿರುವುದು ಆಗಷ್ಟೇ ಕಲಿಕೆ ಆರಂಭಿಸಿದ ಮಕ್ಕಳಿಗೆ. ಈ ಮಕ್ಕಳು ಉನ್ನತ ತರಗತಿಗಳಿಗೆ ಹೋದಂತೆ ಅದರ ಪರಿಣಾಮ ಸ್ಪಷ್ಟವಾಗಲಿದೆ ಎಂದು ಶಿಕ್ಷಣ ವಲಯದ ಪರಿಣಿತರು ಹೇಳಿದ್ದಾರೆ.

ವಾರ್ಷಿಕ ಶೈಕ್ಷಣಿಕ ವರದಿ (ಎ.ಎಸ್.ಇ.ಆರ್.) 2022ರ ಪ್ರಕಾರ, ಎಲ್ಲಾ ವರ್ಗದ ವಿದ್ಯಾರ್ಥಿಗಳಲ್ಲಿ ಕಲಿಕಾ ಮಟ್ಟ 2012ಕ್ಕೂ ಮುಂಚಿನ ಹಂತಕ್ಕೆ ಕುಸಿದಿದೆ. ಮೂಲ ಗಣಿತ ಕೌಶಲ್ಯ 2018ರ ಹಂತಕ್ಕೆ ಕುಸಿದಿದೆ.

ಬಹುತೇಕ ರಾಜ್ಯಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಶಾಲೆಗಳೆರಡರಲ್ಲೂ ಕಲಿಕಾ ಹಿನ್ನಡೆಯಾಗಿದೆ. ಬಾಲಕರು ಹಾಗೂ ಬಾಲಕಿಯರಿಬ್ಬರೂ ಕಲಿಕೆಯಲ್ಲಿ ಹಿಂದೆ ಬಿದ್ದಿದ್ದಾರೆ ಎಂದು ವರದಿ ತಿಳಿಸಿದೆ.

ಆಗಷ್ಟೇ ಓದುವುದು ಹಾಗೂ ಎಣಿಸುವುದನ್ನು ಕಲಿಯುತ್ತಿದ್ದ ಮಕ್ಕಳ ಮೇಲೆ ಅತಿ ಹೆಚ್ಚಿನ ಪರಿಣಾಮವಾಗಿದೆ. ಆರಂಭದ ದಿನಗಳಲ್ಲಿ ಕಲಿಕಾ ವಂಚಿತ ಈ ವಿದ್ಯಾರ್ಥಿಗಳು, ಉನ್ನತ ತರಗತಿಗಳಿಗೆ ತೆರಳಿದ ನಂತರವೂ ಪರಿಣಾಮಗಳನ್ನು ಎದುರಿಸಲಿದ್ದಾರೆ. ಆನ್‌ಲೈನ್ ಶಾಲೆಗಳು ನಡೆದಿದ್ದರೂ ಸಹ, ಕಲಿಕೆಯಲ್ಲಿ ಕೊರತೆಯಾಗಿದೆ ಎಂದು ಹೈದರಾಬಾದ್‌ನ ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಸೈನ್ಸ್‌ನ ಸಹಾಯಕ ಪ್ರಾಧ್ಯಾಪಕ ದೀಪಂಜನ್ ಚಕ್ರವರ್ತಿ ಹೇಳಿದ್ದಾರೆ.

ಒಂದು ವರ್ಗದ ಮಕ್ಕಳು ಕಲಿಕೆಯನ್ನು ಸಂಪೂರ್ಣ ಕಳೆದುಕೊಂಡ ಪರಿಸ್ಥಿತಿ ಎದುರಾಗಿದೆ. ಬಾಲಕಿಯರ ಮೇಲಿನ ಪರಿಣಾಮ ಹೆಚ್ಚಾಗಿದೆ ಎಂದು ಯುನಿಸೆಫ್ ಇಂಡಿಯಾದ ಯಸುಮಸ ಕಿಮುರ ಹೇಳಿದ್ದಾರೆ. 2020-21ರಲ್ಲಿ ಬಹುತೇಕ ಕಲಿಕೆ ಆನ್‌ಲೈನ್ ಮೂಲಕ ನಡೆದಿತ್ತು. ಆಗ ಬಹಳಷ್ಟು ಮಕ್ಕಳು ಶಾಲೆಯಿಂದ ವಂಚಿತರಾಗಿದ್ದರು. ಶಾಲೆಯ ಆರಂಭಿಕ ಹಂತದಲ್ಲಿದ್ದ ಮಕ್ಕಳು ಕಲಿಕೆಯನ್ನಷ್ಟೇ ಅಲ್ಲದೇ ಸಾಮಾಜಿಕ ಕೌಶಲ್ಯ ಕಳೆದುಕೊಂಡಿದ್ದಾರೆ. ಮಧ್ಯಾಹ್ನದ ಬಿಸಿಯೂಟವಿಲ್ಲದೇ ಪೌಷ್ಠಿಕತೆಯಿಂದಲೂ ವಂಚಿತರಾಗಿದ್ದಾರೆಎಂದು ಆರ್ಥಿಕ ಪರಿಣಿತರಾದ ರಿತಿಕಾ ಖೇರ ಹಾಗೂ ಜೀನ್ ಡ್ರೆಜೆ ರೂಪಿಸಿದ ವರದಿಯಲ್ಲಿ ತಿಳಿಸಲಾಗಿದೆ.

ಕೊರೊನಾ ಸಮಯದಲ್ಲಿ ಹಲವಾರು ಮಕ್ಕಳು ಪೋಷಕರನ್ನು ಕಳೆದುಕೊಂಡಿದ್ದಾರೆ. ಇನ್ನು ಹಲವು ಕುಟುಂಬಗಳಲ್ಲಿ ಉದ್ಯೋಗ ನಷ್ಟದ ಸಮಸ್ಯೆಯಾಗಿದೆ. ಪೋಷಕರು ಜೀವನಾಧಾರ ಕಳೆದುಕೊಂಡಿದ್ದಾರೆ. ಈ ಕಾರಣಗಳಿಂದ ಶಾಲೆಯಿಂದ ಹೊರ ಬಿದ್ದವರು, ಮತ್ತೆ ಕಲಿಕೆಗೆ ಬರಲು ಸಾಧ್ಯವಾಗದೇ ಇರಬಹುದು ಎಂದು ಚಕ್ರವರ್ತಿ ಹೇಳಿದ್ದಾರೆ. ಆನ್‌ಲೈನ್ ಕಲಿಕೆಯಲ್ಲೂ ಯಶಸ್ಸು ಗಳಿಸಿದವರಿದ್ದಾರೆ. ಆದರೆ, ಆನ್‌ಲೈನ್ ಕಲಿಕೆ ದುಬಾರಿಯಾಗಿದೆ. ಬಹಳಷ್ಟು ಕುಟುಂಬಗಳು ಈ ವೆಚ್ಚ ನಿರ್ವಹಿಸಲು ಸಾಧ್ಯವಾಗಿಲ್ಲ ಎಂದವರು ತಿಳಿಸಿದ್ದಾರೆ.

## ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಇಂದು ಗಣರಾಜ್ಯೋತ್ಸವ

ದಾವಣಗೆರೆ : ಕುವೆಂಪು ಕನ್ನಡ ಭವನದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಲಯನ್ಸ್ ಕ್ಲಬ್, ವಿದ್ಯಾನಗರ ಇವರುಗಳ ಸಂಯುಕ್ತಾಶ್ರಯದಲ್ಲಿ ಗಣರಾಜ್ಯೋತ್ಸವ ದಿನಾಚರಣೆಯನ್ನು ಇಂದು ಬೆಳಿಗ್ಗೆ 8.30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಆಚರಿಸಲಾಗುವುದು.

ರಾಷ್ಟ್ರ ಧ್ವಜಾರೋಹಣವನ್ನು ಕಸಾಪ ಜಿಲ್ಲಾ ಅಧ್ಯಕ್ಷ ಬಿ. ವಾಮದೇವಪ್ಪ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಕಸಾಪ ಕೇಂದ್ರ ಸಂಸ್ಥೆಯ ಸಂಘಟನಾ ಕಾರ್ಯದರ್ಶಿ ಜಿ. ರುದ್ರಯ್ಯ, ಲಯನ್ಸ್ ಕ್ಲಬ್ ವಿದ್ಯಾನಗರದ ಮಾಜಿ ಗೌರ್ನರ್ ಹೆಚ್.ಎನ್. ಶಿವಕುಮಾರ್ ಆಗಮಿಸುವರು. ಧ್ವಜ ನಿರ್ವಹಣೆಯನ್ನು ಹೋಂ ಗಾರ್ಡ್ಸ್‌ನ ನಿವೃತ್ತ ಜಿಲ್ಲಾ ಕಮಾಂಡೆಂಟ್ ಮಹಾಲಿಂಗಪ್ಪ ನೆರವೇರಿಸುವರು.

## ಪ್ರಣೀತ್‌ಗೆ ಚಾಂಪಿಯನ್ ಆಫ್ ಚಾಂಪಿಯನ್ ಪಟ್ಟ

ದಾವಣಗೆರೆ, ಜ. 25- ರೇಡಿಯೆಂಟ್ ಮೆಂಟಲ್ ಅರ್ಥ್‌ಮೆಟಿಕ್ ವತಿಯಿಂದ ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ನಡೆಸಿದ ರಾಜ್ಯ ಮಟ್ಟದ ಅಬಾಕಸ್ ಕಾಂಪಿಟೇಷನ್‌ನಲ್ಲಿ ನಗರದ 'ಉಷಾ'ಸ್ ಸ್ಕಿಲ್ಸ್ ವಿಲ್ಲೆ ಅಬಾಕಸ್ ಅಂಡ್ ಹ್ಯಾಂಡ್‌ರೈಟಿಂಗ್ ಇನ್‌ಸ್ಟಿಟ್ಯೂಟ್‌ನ ಪ್ರಣೀತ್ ಪೂಜಾರ್ ಏಳು ನಿಮಿಷ, ಹತ್ತು ಸೆಕೆಂಡಿನಲ್ಲಿ 200 ಲೆಕ್ಕಗಳನ್ನು ಬಿಡಿಸಿ ಚಾಂಪಿಯನ್ ಆಫ್ ಚಾಂಪಿಯನ್ ಪಟ್ಟ ಪಡೆದಿದ್ದಾರೆ.

ಸೀನಿಯರ್ ವಿಭಾಗದಲ್ಲಿ ಅದಿತಿ ಎಂ.ಮಲ್ಯೋಗಲ್ ಕಾನ್ಸೋಲೇಷನ್, ಜ್ಯೂನಿಯರ್ ವಿಭಾಗದಲ್ಲಿ ರುತ್ವಿಕ್ ಎರಡನೇ ಬಹುಮಾನ, ಸೋಹನ್ ರಾಜ್, ಲಕ್ಷಿತ್, ಕಾನ್ಸೋಲೇಷನ್ ಹಾಗೂ ಸೀನಿಯರ್ ವಿಭಾಗದಲ್ಲಿ ದಿವಿತ್ ಎರಡನೇ ಬಹುಮಾನ ಹಾಗೂ ಸಮರ್ಥ್, ಜನಿತ್, ಭೈರವ್, ದ್ರುವಾ ಜೆರಾಲಿ ಕಾನ್ಸೋಲೇಷನ್ ಹಾಗೂ ಓಂ ಬೋಂದಾಡೆ, ವಿಷ್ಣು ಪ್ರಿಯಾ ಹಾಗೂ ಸಾಯಿ ವಿಷ್ಣು ಎಂಬ ವಿದ್ಯಾರ್ಥಿಗಳು ಅಬಾಕಸ್‌ನ ಎಲ್ಲಾ ಲೆವೆಲ್‌ಗಳನ್ನು ಪೂರ್ಣ ಗೊಳಿಸಿ ಗ್ರಾಜ್ಯುಯೇಷನ್ ಪಡೆದು ಸಂಸ್ಥೆಗೆ ಕೀರ್ತಿ ತಂದಿ ದ್ದಾರೆ ಎಂದು ಸಂಸ್ಥೆಯ ಮುಖ್ಯಸ್ಥರಾದ ಉಷಾ ಕಿರಣ್ ತಿಳಿಸಿದ್ದಾರೆ.

ರೆಡಿಯಂಟ್ ಮೆಂಟಲ್ ಅರ್ಥ್ ಮೆಟಿಕ್ ಸಂಸ್ಥೆಯಲ್ಲಿ ರಾಜ್ಯಾದ್ಯಂತ 10 ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.




## ನಾಳೆ ಕೊಟ್ಟೂರು ಪಾದಯಾತ್ರೆ ಸಭೆ

ದಾವಣಗೆರೆ, ಜ.25- ಕೊಟ್ಟೂರು ಪಾದಯಾತ್ರೆ ಕೈಗೊಳ್ಳುವ ಸಂಬಂಧ ನಾಡಿದ್ದು ದಿನಾಂಕ 27 ರ ಶುಕ್ರವಾರ ಸಂಜೆ 5 ಗಂಟೆಗೆ ನಗರದ ವಿರಕ್ತಮಠದಲ್ಲಿ ಸರ್ವಭಕ್ತರ ಪಾದ ಯಾತ್ರಿಗಳ ಸಭೆ ಕರೆಯಲಾಗಿದೆ. ಪಾದಯಾತ್ರೆ ಟ್ರಸ್ಟ್ ಸದಸ್ಯರು, ಭಕ್ತರು ಆಗಮಿಸಿ ಸಲಹೆ, ಸೂಚನೆ ನೀಡುವಂತೆ ಚೌಕಿಪೇಟೆಯ ಶ್ರೀ ಗುರು ಕೊಟ್ಟೂರು ರಾಜೇಂದ್ರ ಪಾದ ಯಾತ್ರೆ ಟ್ರಸ್ಟ್‌ನ ಕಣಕುಪ್ಪಿ ಮುರುಗೇಶಪ್ಪ (96118-89151), ಟಿ.ಜೆ. ಬಕ್ಕೇಶಪ್ಪ (9108908898) ತಿಳಿಸಿದ್ದಾರೆ.

## ಹರಿಹರದಲ್ಲಿ ಇಂದು ಗಾಂಧಿ ಮೈದಾನದಲ್ಲಿ ಗಣರಾಜ್ಯೋತ್ಸವ

ಗಾಂಧಿ ಮೈದಾನದಲ್ಲಿ ಇಂದು ಬೆಳಿಗ್ಗೆ 9 ಕ್ಕೆ ಗಣರಾಜ್ಯೋತ್ಸವ ಸಮಾರಂಭದಲ್ಲಿ ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಧ್ವಜಾರೋಹಣ ಮಾಡಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಶಾಸಕ ಎಸ್. ರಾಮಪ್ಪ ವಹಿಸಲಿದ್ದಾರೆ.





ಶ್ರೀಮತಿ ಸುಮಿತ್ರ ಮತ್ತು ದಿ|| ಶ್ರೀ ಕೆ.ಹೆಚ್. ಓಬಳಪ್ಪ,
ನಿವೃತ್ತ ಜಂಟಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಮಾಜಿ ಸದಸ್ಯರು, ಜಿಲ್ಲಾ ಪಂಚಾಯತ್, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.

ನಮ್ಮ ಜೇಷ್ಠ ಪುತ್ರ
ಚಿ|| ರಾ|| ಚೇತನ್‌ಕುಮಾರ್ ಕೆ.ಓ.
(ದಿ|| ಶ್ರೀಮತಿ ಹಾಲಮ್ಮ ಮತ್ತು ದಿ|| ಶ್ರೀ ಕಲ್ಕರೆ ಹನುಮಂತಪ್ಪನವರ ಮೊಮ್ಮಗ, ಹೂವಿನಮಡು)

ಚಿ|| ಸೌ|| ಡಾ. ವರ್ಷ ಎಸ್.
(ಶ್ರೀಮತಿ ಇಂದಿರಾ ಮತ್ತು ಶ್ರೀ ಬಿ.ಕೆ. ಸ್ವಾಮಿ, ನಿವೃತ್ತ ವ್ಯವಸ್ಥಾಪಕರು, ಕೆಮಿನೋವಾ (ಇ) ಲಿ., ವಿಜಯನಗರ, ಬೆಂಗಳೂರು ಇವರ ಸುಪುತ್ರಿ)

ಇವರ ಶುಭ ವಿವಾಹಕ್ಕೆ ತಾವುಗಳು ಆಗಮಿಸಿ, ವಧು-ವರರನ್ನು ಆಶೀರ್ವದಿಸಬೇಕಾಗಿ ಕೋರುವ,

ತಮ್ಮ ಆಗಮನಾಭಿಲಾಷಿಗಳು,
ಶ್ರೀಮತಿ ಸುಮಿತ್ರ ಓಬಳಪ್ಪ
ಡಾ|| ಸಚಿನ್ ಕೆ.ಓ. BE, M.Tech., Ph.D.
ಶ್ರೀಮತಿ ಇಂದಿರಾ ಮತ್ತು ಶ್ರೀ ಬಿ.ಕೆ. ಸ್ವಾಮಿ,
ವಿಶಾಲ್ ಎಸ್. B.E., MBA (IIM)
ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಿ, ಶುಭ ಕೋರಬೇಕಾಗಿ ವಿನಂತಿ.

DgÀvÀPÀëvÉ :
¢£ÁAPÀ 26-1-2023£ÉÃ
UÀÄgÀÄªÁgÀ
¸ÀAeÉ 7-00 jAzÀ

«ªÁºÀ ªÀÄÄºÀÆvÀð :
¢£ÁAPÀ 27-1-2023£ÉÃ

«ªÁºÀ ¸ÀÜ¼À :
wæ±ÀÆ¯ï PÀ¯Á ¨sÀªÀ£À

## ಕಾಮಗಾರಿಗೆ ಎಸ್ಎಆರ್ ಚಾಲನೆ



ದಾವಣಗೆರೆ, ಜ. 25- ನಗರದ ಲೋಕಿಕೆರೆ ರಸ್ತೆ ಮಹಾನಗರ ಪಾಲಿಕೆ ಪ್ರಾದೇಶಿಕ ಕಚೇರಿಯ ಪಕ್ಕದಲ್ಲಿ ಜಿಲ್ಲಾ ಪಂಚಾಯತಿ ಇಂಜಿನಿಯರಿಂಗ್ ಇಲಾಖೆ ಕೈಗೊಂಡಿರುವ ಜಿಲ್ಲಾ ಪಂಚಾಯತಿ ಅಧಿಕಾರಿಗಳ ವಸತಿ ಗೃಹ ಕಚೇರಿ ಕಟ್ಟಡಗಳ ನಿರ್ಮಾಣ ಕಾಮಗಾರಿಯ ಭೂಮಿ ಪೂಜೆ ನೆರವೇರಿಸಲಾಯಿತು. ಶಾಸಕ ಎಸ್.ಎ. ರವೀಂದ್ರನಾಥ್ ಅವರು ಕಾಮಗಾರಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಗುತ್ತಿಗೆದಾರರಾದ ಸುನೀಲ್ ಎಂ. ಅಗಸಿಬಾಗಿಲು, ವಿಜೇತ್ ಮತ್ತಿತರರು ಉಪಸ್ಥಿತರಿದ್ದರು.

## ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ಆಯ್ಕೆ



ದಾವಣಗೆರೆ, ಜ. 25- ನಗರದ ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನ ಎನ್ನೆಸ್ಸೆಸ್ ಘಟಕದ ಸ್ವಯಂ ಸೇವಕ ನಂದನ್ ಕುಮಾರ್ ಎಂ. ಹೆಚ್. ಅವರು ಬೆಂಗಳೂರಿನ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ನಾಳೆ ಗುರುವಾರ ನಡೆಯಲಿರುವ ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ದಾವಣಗೆರೆ ವಿಶ್ವ ವಿದ್ಯಾಲಯದಿಂದ ಆಯ್ಕೆಯಾಗಿದ್ದಾರೆ.

ನಂದನ್ ಕುಮಾರ್ ಎಂ.ಹೆಚ್ ಅವರನ್ನು ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಬಿ.ಸಿ. ಶಿವಕುಮಾರ್, ಆಡಳಿತ ಮಂಡಳಿ ಸದಸ್ಯರು, ಪ್ರಾಂಶುಪಾಲ ಪ್ರೊ. ಗುರು ಎಂ.ಸಿ., ಬೋಧಕ, ಬೋಧಕೇತರ ವರ್ಗದವರು ಅಭಿನಂದಿಸಿದ್ದಾರೆ.

ಗಣರಾಜ್ಯೋತ್ಸವ ಆನ್‌ಲೈನ್ ಕ್ವಿಝ್ ಸ್ಪರ್ಧೆ
REPUBLIC DAY ONLINE QUIZ COMPETITION




ONLINE QUIZ ನಲ್ಲಿ ಭಾಗವಹಿಸಿ ಮತ್ತು ಬಹುಮಾನ ಗೆಲ್ಲಿರಿ
ಜನವರಿ 26 ಗಣರಾಜ್ಯೋತ್ಸವದಂದು, ಬೆಳಗ್ಗೆ 7.00 ಗಂಟೆಗೆ ಪ್ರಾರಂಭ
• ಲಿಂಕ್ : https://rhr.group/quiz •
T&C Apply

ಆರ್. ಹೆಚ್. ರಾಧಾಕೃಷ್ಣ ಗುಪ್ತ ಜ್ಯೂಯಲರ್ಸ್
#17&5/2 Vijayalakshmi Road, Davangere- 577001 | : 6366531112-1113-1116-1117-1118 | : info@rhrjewellers.com
:85508 33300 :63665 81119 | :www.rhrjewellers.com Valet parking available.

CHERRY TYRE PARK India's Largest Chain Of Tyre Stores

SUPREET MOTORS

BOSCH Service
100 Years of Bosch in India
Spark.NXT

GRAND Opening

Your are coordially invited to attend the Grand Opening of our
SUPREET MOTORS
Authorized Bosh Car Services

Thursday 26th January 2023
11.30 onwards

Venue : #5450/A3, Near Shiramagondanahalli, Hadadi Road, Davanagere-577005
+91 8123 506 863 - 9380 015 165 supreetmotorsdvg@gmail.com

1st TIME IN DAVANAGERE

BOSCH Service OUR SERVICES
Body & Painting Work
Complete Car Service
General Service
Oil Change
Car Wash & Spa
Battery Charging & Replacement
Electrical Systems Service
Engine & Emissions Test
Cashless Insurance
Wheel Alignment

PICKUP & DROP FACILITY AVAILABLE

Ceramic Car Coating
STARTING RANGE ₹19,999

PPF - Paint Protection Film
STARTING RANGE ₹49,999

CHERRY TYRE PARK India's Largest Chain Of Tyre Stores SINCE 1991
JK TYRE · Continental · Firestone · MICHELIN · METZELER · GOODYEAR · BRIDGESTONE · MARUTI · TVS TYRES · apollo · CEAT · reise · PIRELLI · MAXXIS

BCL

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte